2017 ಕ.ತೀ.ವ 1355

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ

ಸಿದ್ದು @ ಸಿದ್ದೇಶ್ವರ -ವಿರುದ್ಧ- ಕರ್ನಾಟಕ ರಾಜ್ಯ*

ದಂಡ ಪ್ರಕ್ರಿಯಾ ಸಂಹಿತೆಯ 482ನೇ ಪ್ರಕರಣದ ಅಡಿಯಲ್ಲಿ ಕ್ರಿಮಿನಲ್ ಅರ್ಜಿ.
ಪೋಕ್ಸೊ ಅಧಿನಿಯಮ, 2012 – 34ನೇ ಪ್ರಕರಣ.
ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ನಿಯಮಗಳು, 2007 – ನಿಯಮ 12

ಪೋಕ್ಸೊ ಅಧಿನಿಯಮ, 2012 ರ 34 ನೇ ಪ್ರಕರಣವು ಅರ್ಜಿದಾರನು ಬಾಲಾಪರಾಧಿಯೇ ಅಥವಾ ವಯಸ್ಕ ವ್ಯಕ್ತಿಯೇ ಎಂಬ ಬಗ್ಗೆ ವ್ಯಕ್ತಿಯ ವಯಸ್ಸನ್ನು ನಿರ್ಧರಿಸಲು ವಿಶೇಷ ನ್ಯಾಯಾಧೀಶರು ಅಧಿಕಾರ ನೀಡಿರುವ ಪ್ರಧಾನ ವ್ಯವಸ್ಥೆಯಾಗಿದ್ದು, ಆ ನಿರ್ದಿಷ್ಟ ವ್ಯಕ್ತಿಯನ್ನು ಬಾಲಕ ನ್ಯಾಯ ಮಂಡಳಿ ಮುಂದೆ ಅಥವಾ ವಿಶೇಷ ನ್ಯಾಯಾಲಯದ ಮುಂದೆ ಅಧಿವಿಚಾರಣೆ ಮಾಡಬೇಕಾಗುತ್ತದೆ.

ವ್ಯಕ್ತಿಯು ಮಗುವೇ ಅಥವಾ ಇಲ್ಲವೇ ಎಂಬ ಬಗ್ಗೆ ವಿಶೇಷ ನ್ಯಾಯಾಲಯದ ಮುಂದೆ ವ್ಯವಹರಣೆ ನಡೆಯಬೇಕಾದ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಅಂಥ ವ್ಯಕ್ತಿಯ ಬಗ್ಗೆ ಅದಕ್ಕೆ ಮನವರಿಕೆಯಾದ ತರುವಾಯ ವಿಶೇಷ ನ್ಯಾಯಾಲಯವು ಅಂಥ ಪ್ರಶ್ನೆಯನ್ನು ನಿರ್ಧರಿಸತಕ್ಕದ್ದು ಎಂಬುದನ್ನು ಸದರಿ ಉಪಬಂಧದ (2)ನೇ ಉಪ-ಖಂಡವು ಸ್ಪಷ್ಟವಾಗಿ ಸೂಚಿಸುತ್ತದೆ. ಈ ಉಪಬಂಧದಲ್ಲಿ, "ಅದಕ್ಕೆ ಮನವರಿಕೆಯಾಗುವುದು" ಎಂಬ ಪದಗಳಿಗೆ ಒತ್ತನ್ನು ನೀಡಬೇಕಾಗುತ್ತದೆ ಮತ್ತು ನ್ಯಾಯಾಲಯದ ಮುಂದೆ ಮತ್ತು ತತ್ಕಾಲದಲ್ಲಿರುವ ಕಾನೂನಿನ ಮೇರೆಗೆ ಸಂಬಂಧಪಟ್ಟ ಕಾನೂನಿನ ಮುಂದೆ ಇಡಲಾದ ಮೌಖಿಕ ಮತ್ತು ದಸ್ತಾವೇಜೀಯ-ದಸ್ತಾವೇಜೀಯ

*ಕ್ರಿಮಿನಲ್ ಅರ್ಜಿ ಸಂಖ್ಯೆ: 200464/2015, ದಿನಾಂಕ: 23ನೇ ಏಪ್ರಿಲ್, 2016.

ಸಾಕ್ಷ್ಯಗಳಂಥ ಇತರ ಸುತ್ತಮುತ್ತಲಿನ ಸನ್ನಿವೇಶಗಳನ್ನು ನ್ಯಾಯಾಲಯವು ಹೇಗೆ ಮನವರಿಕೆಯನ್ನು ಮಾಡಿಕೊಳ್ಳಬಲ್ಲದು ಎಂಬುದನ್ನು ಪರೀಕ್ಷಿಸಬೇಕಾಗುತ್ತದೆ.

ಸರ್ಕಾರವು ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ನಿಯಮಗಳು, 2007ನ್ನು ರೂಪಿಸಿದ್ದು. ಸದರಿ ನಿಯಮವು, ಕಾನೂನಿನ ಸಂಘರ್ಷಣೆಯಲ್ಲಿರುವ ಮಕ್ಕಳ ಅಥವಾ ಬಾಲಾಪರಾಧಿಯ ವಯಸ್ಸನ್ನು ಹೇಗೆ ನಿರ್ಧರಿಸಬೇಕಾಗುತ್ತದೆ ಎಂಬುದರ ಬಗೆಗಿನ ನಿರ್ದಿಷ್ಟ ವಿಶೇಷ ಪ್ರಕ್ರಿಯೆಯನ್ನು ಉಪಬಂಧಿಸುತ್ತದೆ. 34 ನೇ ಪ್ರಕರಣವು, ವಯಸ್ಸನ್ನು ನಿರ್ಧರಿಸುವ ನ್ಯಾಯಾಲಯದ ಪ್ರಧಾನ ಹಕ್ಕನ್ನು ನೀಡಿದ್ದು, ಇದರಿಂದ, ಬಾಲಕ ನ್ಯಾಯ(ಸಿಪಿಸಿ) ನಿಯಮಗಳು, 2007ರ 12ನೇ ನಿಯಮವು, ವಿವಾದಿತ ವ್ಯಕ್ತಿಯ ವಯಸ್ಸನ್ನು ನ್ಯಾಯಾಲಯವು ಯಾವ ರೀತಿಯಲ್ಲಿ ಪರಿಗಣಿಸಬೇಕಾಗುತ್ತದೆ ಎಂಬುದನ್ನು ಅನುಸರಿಸಬೇಕಾದ ಪ್ರಕ್ರಿಯೆಯನ್ನು ಉಪಬಂಧಿಸುತ್ತದೆ.

ಮೇಲಿನ ಪ್ರಕ್ರಿಯೆಯ ಬೆಳಕಿನಲ್ಲಿ ನ್ಯಾಯಾಲಯವು, ನ್ಯಾಯಾಲಯದ ಮುಂದಿರುವ ವ್ಯಕ್ತಿಯು, ಕಾನೂನಿನ ಸಂಘರ್ಷಣೆಯಲ್ಲಿರುವವರು ಬಾಲಾಪರಾಧಿಯೇ ಅಥವಾ ಇಲ್ಲವೇ ಎಂಬ ಅಂಶವನ್ನು ಪರಿಗಣಿಸಬೇಕು. ಶಾಲೆಯಿಂದ ಮೆಟ್ರಿಕ್ಯುಲೇಷನ್ ಅಥವಾ ತತ್ಸಮಾನ ಪ್ರಮಾಣಪತ್ರ ಮತ್ತು ಜನನ ದಿನಾಂಕ ಪ್ರಮಾಣ ಪತ್ರಗಳಂಥ ಮತ್ತು ಕಾರ್ಪೋರೇಷನ್ ಅಥವಾ ಮುನಿಸಿಪಲ್ ಪ್ರಾಧಿಕಾರವು ಹೊರಡಿಸಿದ ಜನನ ಪ್ರಮಾಣ ಪತ್ರದಂಥ ದಸ್ತಾವೇಜುಗಳು ಲಭ್ಯವಿದ್ದರೆ, ನ್ಯಾಯಾಲಯವು ಯಾವ ನಿರ್ಣಯವನ್ನು ತೆಗೆದುಕೊಳ್ಳಬೇಕು ಎಂಬ ಬಗೆಗಿನ ಕೆಲವು ತತ್ವಗಳನ್ನು ನ್ಯಾಯಾಲಯಕ್ಕೆ ಮಾರ್ಗದರ್ಶನ ಮಾಡುವುದನ್ನು ಈ ಉಪಬಂಧವೇ ಸ್ಪಷ್ಟವಾಗಿ ಪ್ರಕಟಿಸುತ್ತದೆ. ಈ ಸಾಕ್ಷ್ಯಗಳು ನ್ಯಾಯಾಲಯದ ಮುಂದೆ ಲಭ್ಯವಾಗಿದ್ದರೆ, ನ್ಯಾಯಾಲಯವು, ವೈದ್ಯಕೀಯ ಅಭಿಪ್ರಾಯವನ್ನು ನೋಡುವ ಅಭ್ಯಂತರವಿರುವುದಿಲ್ಲ ಅಥವಾ ನ್ಯಾಯಾಲಯದ ಮುಂದೆ ರುಜುವಾತುಪಡಿಸಬೇಕೆಂದು ಕೋರಲಾದ ವಯಸ್ಸಿಗೆ ಸಂಬಂಧಪಟ್ಟ ವೈದ್ಯಕೀಯ ಅಭಿಪ್ರಾಯವನ್ನು ಪೋಲೀಸರು ಸಹ ಪಡೆದುಕೊಳ್ಳುವ ಅಗತ್ಯವಿರುವುದಿಲ್ಲ. ನಿಯಮಗಳು, 2007 ರ 12(3) ನಿಯಮದಲ್ಲಿ ಸೂಚಿಸಲಾದಂಥ ದಸ್ತಾವೇಜುಗಳು ಇಲ್ಲದಿರುವಾಗ ಮಾತ್ರ, ನ್ಯಾಯಾಲಯವು, ಬಾಲಾಪರಾಧಿಯ ಅಥವಾ ಮಕ್ಕಳ

ವಯಸ್ಸನ್ನು ನಿರ್ಧರಿಸುವ ಯುಕ್ತವಾಗಿ ರಚಿಸಲಾದ ವೈದ್ಯಕೀಯ ಮಂಡಳಿಗೆ ವ್ಯಕ್ತಿಯನ್ನು ಕಳುಹಿಸುವ ಗತ್ಯಂತರವಿರುತ್ತದೆ. ಸರಿಯಾದ ವಯಸ್ಸಿನ ನಿರ್ಧರಣೆಯನ್ನು ಮಾಡಿರದಿದ್ದ ಪಕ್ಷದಲ್ಲಿ, ನ್ಯಾಯಾಲಯ ಅಥವಾ ಮಂಡಳಿಯು, ತಾನು ದಾಖಲಿಸಬೇಕಾದ ಕಾರಣಗಳಿಗಾಗಿ, ಸಂದರ್ಭಾನುಸಾರ ಒಂದು ವರ್ಷದ ಅಂಚಿನ ಒಂದು ಭಾಗದಲ್ಲಿ ಅವನ ವಯಸ್ಸನ್ನು ಪರಿಗಣಿಸುವ ಮೂಲಕ ಮಗುವಿಗೆ ಅಥವಾ ಬಾಲಾಪರಾಧಿಗೆ ಅನುಕೂಲ ಮಾಡುವ ಅಗತ್ಯವನ್ನು ಪರಿಗಣಿಸುವುದಾದರೆ, ನ್ಯಾಯಾಲಯವು, ಲಭ್ಯವಿರಬಹುದಾದಂಥ ಸಾಕ್ಷ್ಯವನ್ನು ಅಥವಾ ವೈದ್ಯಕೀಯ ಅಭಿಪ್ರಾಯವನ್ನು ಪರಿಗಣನೆಗೆ ತೆಗೆದುಕೊಂಡ ನಂತರವಷ್ಟೇ ಅಂಥ ಪ್ರಕರಣಗಳಿಗೆ ಆದೇಶವನ್ನು ಹೊರಡಿಸುವಾಗ ವ್ಯಕ್ತಿಯ ವಯಸ್ಸಿಗೆ ಸಂಬಂಧಪಟ್ಟಂತೆ ನಿರ್ಣಯವನ್ನು ದಾಖಲಿಸುವ ಮೂಲಕ ಸಂದರ್ಭಾನುಸಾರ ನ್ಯಾಯಾಲಯವೂ ಸಹ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು ಮತ್ತು ಆಗ ಮಾತ್ರ ಪ್ರಕರಣವನ್ನು ಮುಂದುವರಿಸಬೇಕು. ಆಪಾದಿತ ಅಪರಾಧ ನಡೆದ ದಿನಾಂಕದಂದು ಇದ್ದಂತೆ ಸಂತ್ರಸ್ತರ ವಯಸ್ಸು 18 ವರ್ಷಗಳಿಗಿಂತ ಹೆಚ್ಚಾಗಿದ್ದರೆ, ವಿಶೇಷ ನ್ಯಾಯಾಲಯವು, ಅಪರಾಧಿಯನ್ನು ಅಧಿವಿಚಾರಿಸಲು ಮೊಕದ್ದಮೆಯನ್ನು ಮುಂದುವರಿಸಬಹುದು ಮತ್ತು ಅವನ 18 ವರ್ಷಗಳಿಗಿಂತ ಕಡಿಮೆ ವಯಸ್ಸಿನವನಾಗಿದ್ದರೆ, ನ್ಯಾಯಾಲಯವು, ಬಾಲಾಪರಾಧಿಯನ್ನು ಸಕ್ಷಮ ಪ್ರಾಧಿಕಾರದ ಮುಂದೆ ಎಂದರೆ ಬಾಲಾಪರಾಧ ನ್ಯಾಯ ನಿರ್ಣಯ ಮಂಡಳಿಗೆ ಕಳುಹಿಸುವ ಆದೇಶವನ್ನು ಹೊರಡಿಸತಕ್ಕದ್ದು.

ಅರ್ಜಿದಾರ / ಆಪಾದಿತನ ವಯಸ್ಸನ್ನು ನಿರ್ಧರಿಸುವಲ್ಲಿ ಮೇಲಿನ ಸದರಿ ನಿಯಮಗಳು ಮತ್ತು ಮಾರ್ಗಸೂಚಿಗಳನ್ನು ವಾಸ್ತವವಾಗಿ ಅಧಿವಿಚಾರಣಾ ನ್ಯಾಯಾಲಯವು ಅನ್ವಯಿಸಿದೆಯೇ ಎಂಬುದನ್ನು ಈಗ ಪರಿಗಣಿಸಬೇಕಾಗಿದೆ. ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ಶಾಲಾ ಪ್ರಮಾಣ ಪತ್ರಗಳನ್ನು ನಿಶಾನೆ ಪಿ.16 ರಿಂದ ನಿಶಾನೆ ಪಿ.20 ಎಂದು ಗುರುತು ಮಾಡಲಾಗಿದೆ. ಸಾಕ್ಷ್ಯದ ಕ್ರಮದ ಅವಧಿಯಲ್ಲಿ, ಕೆಲವು ಇತರ ದಸ್ತಾವೇಜುಗಳು – ನಿಶಾನೆ ಪಿ.35 ರಿಂದ ಪಿ.38 ಎಂದರೆ ಮೆಹ್ಕರ್ ಡಿ. ಕೇಂದ್ರವು ನಿರ್ವಹಿಸಿದ ರಿಜಿಸ್ಟರುಗಳು ಮತ್ತು ದಸ್ತಾವೇಜುಗಳನ್ನು, ಆಪಾದಿತನ ಮತ್ತು ಆತನ ಸಹೋದರಿಯ ಜನನ ದಿನಾಂಕವನ್ನು ತೋರಿಸಲು ನ್ಯಾಯಾಲಯದ ಮುಂದೆ

ಹಾಜರುಪಡಿಸಲಾಗಿದ್ದು, ಅವುಗಳನ್ನು ಈಗಾಗಲೇ ಮೇಲೆ ಉಲ್ಲೇಖಿಸಲಾಗಿದೆ. ಈಗಾಗಲೇ ಹೇಳಲಾದಂತೆ, ಇಬ್ಬರು ವೈದ್ಯರ ಎರಡು ಅಭಿಪ್ರಾಯಗಳು ಎಂದರೆ ಪ್ರಾಸಾ–8 ಮತ್ತು ಪ್ರಾಸಾ–18 ರ ಅಭಿಪ್ರಾಯಗಳು ಇರುತ್ತವೆ. ಎರಡು ಜೊತೆ ದಸ್ತಾವೇಜುಗಳು ಇರುವಾಗ, ನ್ಯಾಯಾಲಯವು, ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ಆ ದಸ್ತಾವೇಜುಗಳನ್ನು ಅಥವಾ ಯಾವುದೇ ದಸ್ತಾವೇಜುಗಳನ್ನು, ಅವುಗಳು ಖೋಟಾ ಆಗಿವೆ ಎನ್ನುವ ಆಧಾರದ ಮೇಲಿನ ಯಾವುದೇ ಕಾರಣಕ್ಕಾಗಿ ನಂಬಲಾಗದು ಎನ್ನುವ ಯಾವುದೇ ನಿರ್ಣಯಕ್ಕೆ ಬಂದಿದ್ದರೆ ಅಥವಾ ಅನ್ಯಥಾ ಮತ್ತು ನ್ಯಾಯಾಲಯವು, ಅಂಥ ದಸ್ತಾವೇಜಿನ ಆಧಾರದ ಮೇಲೆ ನಿರ್ಣಯವನ್ನು ನೀಡಲಾಗುವುದಿಲ್ಲ ಎಂಬ ಯಾವುದೇ ನಿರ್ಣಯಕ್ಕೆ ಬಂದಿದ್ದರೆ, ಆಗ ಮಾತ್ರ ನ್ಯಾಯಾಲಯಕ್ಕೆ ವೈದ್ಯಕೀಯ ಮಂಡಳಿಯು ಪರೀಕ್ಷಿಸಿದ ಆಪಾದಿತನನ್ನು ಕರೆಸಿಕೊಳ್ಳುವ ಗತ್ಯಂತರವಿರುತ್ತದೆ ಮತ್ತು ಇದಾದ ನಂತರ ವೈದ್ಯಕೀಯ ಮಂಡಳಿಯ ಅಭಿಪ್ರಾಯವನ್ನು ಪರಿಗಣಿಸಬಹುದು. ಈ ನಿರ್ದಿಷ್ಟ ಪ್ರಕರಣದಲ್ಲಿ, ಈಗಾಗಲೇ ಸೂಚಿಸಲಾದಂತೆ, ತನಿಖಾಧಿಕಾರಿ ಅಥವಾ ನ್ಯಾಯಾಲಯವು, ಅವು ಖೋಟಾ ಆಗಿವೆಯೇ ಎಂಬ ಬಗ್ಗೆ ಅಥವಾ ಆ ದಸ್ತಾವೇಜುಗಳು ಗಂಭೀರ ಸಂದೇಹವನ್ನು ಸೃಜಿಸುತ್ತವೆ ಎಂಬ ಬಗ್ಗೆಯಾಗಲಿ ದಾಖಲೆಯಲ್ಲಿರುವ ದಸ್ತಾವೇಜೀಯ ಸಾಕ್ಷ್ಯಕ್ಕೆ ಸಂಬಂಧಪಟ್ಟಂತೆ ಯಾವುದೇ ಅಭಿಪ್ರಾಯವನ್ನು ನೀಡಿರುವುದಿಲ್ಲ. ಆದುದರಿಂದ, ನ್ಯಾಯಾಲಯವು ಅಂಥ ದಸ್ತಾವೇಜುಗಳ ಆಧಾರದ ಮೇಲೆ ಆಪಾದಿತನ ವಯಸ್ಸನ್ನು ನಿರ್ಧರಿಸಲಾಗುವುದಿಲ್ಲ, ಆದುದರಿಂದ, ಈ ಮೇಲಿನ ಕಾರಣಗಳಿಗಾಗಿ ಪ್ರಸ್ತುತ ಕ್ರಿಮಿನಲ್ ಅರ್ಜಿಗಳನ್ನು ಪುರಸ್ಕರಿಸಲಾಗಿದೆ.

***ಉಲ್ಲೇಖಿಸಲಾದ ಮೊಕದ್ದಮೆಗಳು*** — ***ಪ್ಯಾರಾಗಳಲ್ಲಿ***

1. *2011 (13) ಎಸ್‌ಸಿಸಿ 751*
   *ಷಾ ನವಾಜ್ –ವಿರುದ್ಧ–*
   *ಉತ್ತರ ಪ್ರದೇಶ ರಾಜ್ಯ ಮತ್ತು ಮತ್ತೊಬ್ಬರು* — *(ಉಲ್ಲೇ) 19*

*2. 2014 (12) ಎಸ್‌ಸಿಸಿ 332*
*ಕುಲಾಯ್ ಇಬ್ರಾಹಿಂ @ ಇಬ್ರಾಹಿಂ –ವಿರುದ್ಧ– ರಾಜ್ಯ*
*ಬಿ–1 ರಿಂದ ಪ್ರತಿನಿಧಿತ ಬಜಾರ್ ಪೊಲೀಸ್ ಸ್ಟೇಷನ್,*
*ಕೊಯಮತ್ತೂರು (ಉಲ್ಲೇ) 21*

ಅರ್ಜಿದಾರನ ಪರವಾಗಿ: ಶ್ರೀ ಸಂಜಯ್ ಎ. ಪಾಟೀಲ್, ವಕೀಲರು
ಪ್ರತ್ಯರ್ಜಿದಾರರ ಪರವಾಗಿ: ಶ್ರೀ ಮಕ್ಬೂಲ್ ಅಹ್ಮದ್, ಎಚ್‌ಸಿಜಿಪಿ (ಉಚ್ಚ ನ್ಯಾಯಾಲಯ ಸರ್ಕಾರಿ ವಕೀಲರು)

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಕೆ.ಎನ್. ಫಣೀಂದ್ರ**

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಬೀದರ್ (ಇಲ್ಲಿ ಇನ್ನು ಮುಂದೆ ಸಂಕ್ಷಿಪ್ತತೆಗಾಗಿ 'ವಿಶೇಷ ನ್ಯಾಯಾಧೀಶರು' ಎಂದು ಉಲ್ಲೇಖಿಸಲಾಗಿದೆ) ಇದರ ಮುಂದೆ ಇದ್ದ ಕಡತದಲ್ಲಿನ ವಿಶೇಷ ಪ್ರಕರಣ ಸಂ.4/2015 ರಲ್ಲಿ ಆಪಾದಿತನೆಂದು ಆರೋಪಿಸಲಾದ ಅರ್ಜಿದಾರನು, ದಿನಾಂಕ 22.04.2015 ರ ಆದೇಶವನ್ನು ರದ್ದುಗೊಳಿಸಲು ಕೋರಿ ಈ ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಸದರಿ ಪ್ರಕರಣದಲ್ಲಿ ಮಾನ್ಯ ವಿಶೇಷ ನ್ಯಾಯಾಧೀಶರು, ಅರ್ಜಿದಾರನು ಆಪಾದಿತ ಅಪರಾಧದ ದಿನಾಂಕದಂದು 18 ವರ್ಷಗಳಿಗಿಂತ ಹೆಚ್ಚು ವಯಸ್ಸಿನವನಾಗಿದ್ದನೆಂದು ಆದುದರಿಂದ, ಇದನ್ನು ವಿಶೇಷ ನ್ಯಾಯಾಲಯದ ಮುಂದೆ ಅಧಿವಿಚಾರಣೆ ನಡೆಸಬಹುದಾಗಿದೆಯೆಂದು ಅಭಿಪ್ರಾಯಪಟ್ಟು ಪೋಕ್ಸೊ ಅಧಿನಿಯಮ, 2012ರ 34ನೇ ಪ್ರಕರಣದ ಮೇರೆಗೆ ಆದೇಶವನ್ನು ಹೊರಡಿಸಿದ್ದರು.

2. ಈ ಮೊದಲು ಅರ್ಜಿದಾರನು, ವಿಶೇಷ ಪ್ರಕರಣ ಸಂ. 4/2015 ನ್ನು ಹೆಚ್ಚಿನ ವ್ಯವಹರಣೆಗಳಿಗಾಗಿ ಬಾಲಕ ನ್ಯಾಯ ಮಂಡಳಿಗೆ ವರ್ಗಾಯಿಸುವುದನ್ನು ನಿರಾಕರಿಸಿ, ಪ್ರಧಾನ ಸೆಷನ್ಸ್ ನ್ಯಾಯಾಧೀಶರು ಹೊರಡಿಸಿದ್ದ ದಿನಾಂಕ 23.02.2015ರ

ಆದೇಶವನ್ನು ಪ್ರಶ್ನಿಸಿ ಕ್ರಿಮಿನಲ್ ಅರ್ಜಿ ಸಂ.200335/2015 ರಲ್ಲಿ ಈ ನ್ಯಾಯಾಲಯದ ಮೊರೆ ಹೋಗಿದ್ದನೆಂಬುದನ್ನು ದಾಖಲೆಗಳು ಪ್ರಕಟಪಡಿಸುತ್ತವೆ.

3. ಮೇಲಿನ ಸದರಿ ಪ್ರಕರಣದಲ್ಲಿ ವ್ಯವಹರಣೆಗಳ ಉದ್ದಕ್ಕೂ ಅರ್ಜಿದಾರನು, ತಾನು ಆಪಾದಿತ ಅಪರಾಧದ ದಿನಾಂಕದಂದು ಕಾನೂನಿನ ಸಂಘರ್ಷದಲ್ಲಿ ಬಾಲಾಪರಾಧಿಯಾಗಿದ್ದನೆಂದು ಕ್ಲೇಮು ಮಾಡಿರುವನು. ಹಲಸೂರು ಪೊಲೀಸು, ಬಸವಕಲ್ಯಾಣ ತಾಲೂಕು ಇವರು, ಅಪರಾಧಿಯು ಆರು ವರ್ಷ ವಯಸ್ಸಿನ ಸಂತ್ರಸ್ತ–ಬಾಲಕಿ ಮೇಲೆ ಅತ್ಯಾಚಾರ ನಡೆಸಿರುವನು ಎಂಬ ಆಪಾದನೆಗಳ ಮೇಲೆ ಅರ್ಜಿದಾರ / ಆಪಾದಿತನ ವಿರುದ್ಧ ದೋಷಾರೋಪ ಪಟ್ಟಿಯನ್ನು ಸಿದ್ಧಪಡಿಸಿರುವರು ಎಂಬುದನ್ನು ದಾಖಲೆಗಳೂ ಸಹ ಬಹಿರಂಗಪಡಿಸುತ್ತವೆ. ಇದು ಸಂತ್ರಸ್ತ–ಬಾಲಕಿ ಮೇಲೆ ಮಾಡಿದ ಭೇದಕ ಲೈಂಗಿಕ ಹಲ್ಲೆಯಾಗಿತ್ತೆಂಬ ಗಂಭೀರ ಆಪಾದನೆಯನ್ನು ಮಾಡಲಾಗಿತ್ತು. ಆದುದರಿಂದ ಪೊಲೀಸರು ಭಾರತ ದಂಡ ಸಂಹಿತೆಯ 376 (ಎಫ್) ಮತ್ತು 506ನೇ ಪ್ರಕರಣದ ಮೇರೆಗೆ ಮತ್ತು ಪೋಕ್ಸೊ ಅಧಿನಿಯಮ, 2012 ರ 6ನೇ ಪ್ರಕರಣದ ಅಡಿಯಲ್ಲಿ ದೋಷಾರೋಪ ಪಟ್ಟಿಯನ್ನು ತಯಾರಿಸಿದ್ದರು.

4. ಪ್ರಾರಂಭಿಕ ಹಂತಗಳಲ್ಲಿ ಎಂದರೆ ದಿನಾಂಕ 11.08.2014 ರ ಆದೇಶದ ಪ್ರಕಾರ ಮಾನ್ಯ ವಿಶೇಷ ನ್ಯಾಯಾಧೀಶರು, ದಸ್ತಾವೇಜುಗಳನ್ನು ಪರಿಗಣಿಸಿದ ನಂತರ ಮತ್ತು ಉಪ–ಪ್ರಾಂಶುಪಾಲರು, ಸರ್ಕಾರಿ ಪದವಿಪೂರ್ವ ಕಾಲೇಜು, ಮಹ್ಕರ್, ಇವರು ನೀಡಿದ್ದ ಸಾಕ್ಷ್ಯವನ್ನು ಆಧರಿಸಿ, ಅರ್ಜಿದಾರನು ಆಪಾದಿತ ಅಪರಾಧದ ದಿನಾಂಕದಂದು 18 ವರ್ಷಗಳಿಗಿಂತ ಕಡಿಮೆಯಿರದ ವಯಸ್ಸಿನ ಬಾಲಾಪರಾಧಿಯಾಗಿದ್ದನೆಂದು ಕಂಡು ಬಂದಿದ್ದು, ಹೆಚ್ಚಿನ ವ್ಯವಹರಣೆಗಳಿಗಾಗಿ ಬಾಲಕ ನ್ಯಾಯ ಮಂಡಳಿಗೆ ಆಪಾದಿತನನ್ನು ಕಳುಹಿಸಿದ್ದರು. ದಿನಾಂಕ 22.02.2013 ರಂದು ಬಾಲಕ ನ್ಯಾಯ ಮಂಡಳಿ ಮುಂದೆ ವ್ಯವಹರಣೆಗಳನ್ನು ನಡೆಸುವ ಅವಧಿಯಲ್ಲಿ ಬಾಲಕ ನ್ಯಾಯ ಮಂಡಳಿಯು ಶಾಲಾ ದಾಖಲೆಗಳ ಬಗ್ಗೆ ಮತ್ತು ಅವನ ವಯಸ್ಸಿಗೆ ಸಂಬಂಧಿಸಿದಂತೆ ಆಪಾದಿತನ ದೈಹಿಕ ಆಧಾರದ ಮೇಲೂ ಕೂಡ ತನ್ನ ಸಂದೇಹವನ್ನು ವ್ಯಕ್ತಪಡಿಸಿ, ಅರ್ಜಿದಾರನ ವಯಸ್ಸನ್ನು ಪರಿಗಣಿಸುವ

ಉದ್ದೇಶಕ್ಕಾಗಿ ತಜ್ಞ ವೈದ್ಯರಿಂದ ಮತ್ತೊಂದು ಪ್ರಮಾಣಪತ್ರವನ್ನು ಪಡೆದಕೊಳ್ಳಲು ಪೊಲೀಸರಿಗೆ ಮತ್ತೊಮ್ಮೆ ಸೂಚಿಸಿದರು. ಇದಾದ ನಂತರ, ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಅರ್ಜಿದಾರನನ್ನು ಒಳಪಡಿಸಿದ ತನಿಖಾಧಿಕಾರಿ ಮತ್ತು ಪ್ರಾಸಿಕ್ಯೂಷನ್ ಸಾಕ್ಷ್ಯ 18 – ಡಾ॥ ಕುಸುಮ, ವಿಕ್ಟೋರಿಯಾ ಆಸ್ಪತ್ರೆಯ ರೇಡಿಯಾಲಜಿ ತಜ್ಞೆ, ಇವರು ಅರ್ಜಿದಾರನನ್ನು ಪರೀಕ್ಷಿಸಿದ ನಂತರ, ಅವನು 20 ವರ್ಷಗಳನ್ನು ಮೀರಿದ ವಯಸ್ಸಿನವನಾಗಿದ್ದನೆಂಬುದನ್ನು ತಿಳಿಸುವ ವರದಿಯನ್ನು ಸಲ್ಲಿಸಿದರು. ಸದರಿ ವರದಿಯನ್ನು ಆಧರಿಸಿ, ಬಾಲಕ ನ್ಯಾಯ ಮಂಡಳಿ, ಬೀದರ್ ಇವರು, ಅರ್ಜಿದಾರನ ವಯಸ್ಸನ್ನು ನಿರ್ಧರಿಸುವ ಸಂಬಂಧ ವಿಶೇಷ/ಸೆಷನ್ಸ್ ನ್ಯಾಯಾಲಯಕ್ಕೆ ಪ್ರಕರಣವನ್ನು ಮತ್ತೊಮ್ಮೆ ಕಳುಹಿಸಿದರು.

5. ಕ್ರಿಮಿನಲ್ ಅರ್ಜಿ ಸಂ. 200335/2015ರಲ್ಲಿ ಹೊರಡಿಸಲಾದ ಆದೇಶದಲ್ಲಿ, ಈ ನ್ಯಾಯಾಲಯಕ್ಕೆ ವೈದ್ಯರುಗಳಲ್ಲಿ ಭಿನ್ನಬಗೆಯ ಅಭಿಪ್ರಾಯಗಳು ಕಂಡುಬಂದಿದ್ದು, ಅರ್ಜಿದಾರನ ವಯಸ್ಸಿಗೆ ಸಂಬಂಧಿಸಿದ ದೋಷಾರೋಪ ಪಟ್ಟಿಯೊಂದಿಗೆ ದಸ್ತಾವೇಜುಗಳನ್ನು ಸಹ ಹಾಜರುಪಡಿಸಲಾಯಿತು. ಆದುದರಿಂದ ಈ ನ್ಯಾಯಾಲಯವು, ಆಪಾದಿತರ ವಯಸ್ಸನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಸಂಬಂಧಪಟ್ಟಿರುವ ಅಗತ್ಯ ಸಾಕ್ಷಿದಾರರ ಸಾಕ್ಷ್ಯವನ್ನು ದಾಖಲಿಸಬೇಕೆಂದು ಮಾನ್ಯ ವಿಶೇಷ ನ್ಯಾಯಾಧೀಶರಿಗೆ, ಸೂಚಿಸಿತು ಮತ್ತು ಇದಾದ ನಂತರ ಪೋಕ್ಸೊ ಅಧಿನಿಯಮ, 2012 ರ 34ನೇ ಪ್ರಕರಣದ ಮೇರೆಗೆ ಆದೇಶವನ್ನು ಹೊರಡಿಸಲಾಯಿತು. ಯಾವುದೇ ಕಾರಣಕ್ಕಾಗಿ, ಅಧಿವಿಚಾರಣಾ ನ್ಯಾಯಾಲಯವು, ಅರ್ಜಿದಾರನು ಬಾಲಾಪರಾಧಿಯಲ್ಲದಿದ್ದರೆ ಆಗ ಮಾತ್ರ ಪ್ರಕರಣದ ಗುಣಾವಗುಣಗಳ ಕುರಿತು ಹೆಚ್ಚಿನ ಸಾಕ್ಷ್ಯವನ್ನು ದಾಖಲಿಸಲು ಮುಂದಾಗಬಹುದೆಂದು, ಇಲ್ಲದಿದ್ದರೆ, ಮಾನ್ಯ ವಿಶೇಷ ನ್ಯಾಯಾಧೀಶರು ಹೆಚ್ಚಿನ ವ್ಯವಹರಣೆಗಳಿಗಾಗಿ ಬಾಲಕ ನ್ಯಾಯ ಮಂಡಳಿಗೆ ಅರ್ಜಿದಾರನನ್ನು ಕಳುಹಿಸಬೇಕೆಂದು ಅಭಿಪ್ರಾಯಪಟ್ಟಿತು.

6. ಮೇಲಿನ ಸದರಿ ಸೂಚನೆಯ ಆಧಾರದ ಮೇಲೆ ಮಾನ್ಯ ವಿಶೇಷ ನ್ಯಾಯಾಧೀಶರು, ಅರ್ಜಿದಾರನ ವಯಸ್ಸನ್ನು ಪರಿಗಣಿಸುವ ಉದ್ದೇಶಕ್ಕಾಗಿ

ಸಂಬಂಧಪಟ್ಟಿರುವ ಕೆಲವು ಸಾಕ್ಷಿದಾರರ ಸಾಕ್ಷ್ಯಗಳನ್ನು ದಾಖಲಿಸಲು ಮುಂದಾದರು ಮತ್ತು ಪ್ರಶ್ನಿತ ಆದೇಶವನ್ನು ಹೊರಡಿಸುವ ಮೂಲಕ, ಮಾನ್ಯ ವಿಶೇಷ ನ್ಯಾಯಾಧೀಶರು, ಪೋಕ್ಸೊ ಅಧಿನಿಯಮದ 34ನೇ ಪ್ರಕರಣದ ಮೇರೆಗೆ ಆದೇಶವನ್ನು ಹೊರಡಿಸಿ, ಅರ್ಜಿದಾರನು ಆಪಾದಿತ ಅಪರಾಧದ ದಿನಾಂಕದಂದು ಇದ್ದಂಥ 18 ವರ್ಷಗಳನ್ನು ಮೀರಿದ ವಯಸ್ಸಿನವನಾಗಿದ್ದನೆಂದು ಅಭಿಪ್ರಾಯಪಡುವ ಮೂಲಕ ವಿಶೇಷ ನ್ಯಾಯಾಲಯದ ಮುಂದೆಯೇ ಅಧಿವಿಚಾರಣೆಯನ್ನು ಎದುರಿಸಲು ಅವನಿಗೆ ಆದೇಶಿಸಿದರು. ಈ ಹಿನ್ನೆಲೆಯಲ್ಲಿ, ಸದರಿ ಆದೇಶವನ್ನು ಪ್ರಶ್ನಿಸಿ, ಅರ್ಜಿದಾರನು ಮತ್ತೊಮ್ಮೆ ಈ ನ್ಯಾಯಾಲಯದ ಮುಂದೆ ಬಂದಿದ್ದಾನೆ.

7. ಅರ್ಜಿದಾರನ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ಇದೇ ದಸ್ತಾವೇಜುಗಳನ್ನು ಆಧರಿಸಿ, ಈ ಮೊದಲು ಮಾನ್ಯ ವಿಶೇಷ ನ್ಯಾಯಾಧೀಶರು, ಅರ್ಜಿದಾರನು ಬಾಲಾಪರಾಧಿಯಾಗಿರುವನು ಎಂಬ ನಿರ್ಣಯಕ್ಕೆ ಬಂದಿದ್ದರೆಂದು ಭಾವಾವೇಶಪೂರಿತವಾಗಿ ವಾದಿಸಿದ್ದಾರೆ. ಅವರು ಮತ್ತೆ, ಮಾನ್ಯ ವಿಶೇಷ ನ್ಯಾಯಾಧೀಶರು, ವಾಸ್ತವವಾಗಿ, ಬಾಲಕ ನ್ಯಾಯ ಮಂಡಳಿಯು ಹೊರಡಿಸಿದ ನಿರ್ದೇಶನದ ಮೇಲೆ ದೋಷಾರೋಪ ಪಟ್ಟಿಯನ್ನು ಸಲ್ಲಿಸಿದ ನಂತರ ಇಬ್ಬರು ವೈದ್ಯರುಗಳು ಎಂದರೆ ತನಿಖೆಯ ಅವಧಿಯಲ್ಲಿ ಶೇಖರಿಸಿದ್ದ ಒಂದು ಪ್ರಮಾಣ ಪತ್ರವಾಗಿದ್ದು, ಇದು ದೋಷಾರೋಪ ಪಟ್ಟಿಯ ಒಂದು ಅವಿಭಾಜ್ಯ ಅಂಗವಾಗಿದೆ ಮತ್ತು ಮತ್ತೊಂದು ಡಾ|| ಕುಸುಮಾರವರು ನೀಡಿದ ಪ್ರಮಾಣ ಪತ್ರಗಳು, ಇವರು ಸಲ್ಲಿಸಿದ ವೈದ್ಯಕೀಯ ವರದಿಗಳೆರಡನ್ನು ಅವಲಂಬಿಸಿದ್ದರೆಂದು ವಾದಿಸಿದ್ದಾರೆ. ಮಾನ್ಯ ವಿಶೇಷ ನ್ಯಾಯಾಧೀಶರು, ದಾಖಲೆಯಲ್ಲಿರುವ ಎಲ್ಲಾ ದಸ್ತಾವೇಜುಗಳನ್ನು ಪರಿಗಣಿಸಿ, ಅವರು ಅದೇ ದಸ್ತಾವೇಜುಗಳ ಕೆಲವು ಭಾಗವನ್ನು ತಪ್ಪಾಗಿ ಅವಲಂಬಿಸಿದ್ದರೂ ಕೆಲವು ದಸ್ತಾವೇಜುಗಳನ್ನು ದುರುದ್ದೇಶದಿಂದ ಬದಲಾಯಿಸಲು ಪ್ರಯತ್ನಿಸಲಾಗಿದೆಯೆಂದು ತಿಳಿಸಿದ್ದರೂ ಕೂಡ ಡಾ|| ಕುಸುಮಾರವರು ನೀಡಿದ ತರುವಾಯದ ಪ್ರಮಾಣ ಪತ್ರವನ್ನು ಆಧರಿಸಿದ್ದಾರೆ. ಅಂತಿಮವಾಗಿ, ಆಪಾದಿತ ಅಪರಾಧದ ದಿನಾಂಕದಂದು ಅರ್ಜಿದಾರನಿಗೆ 18 ವರ್ಷಗಳಿಗಿಂತ ಹೆಚ್ಚಿನ ವಯಸ್ಸಾಗಿತ್ತೆನ್ನುವ ನಿರ್ಣಯಕ್ಕೆ ಬಂದಿರುತ್ತಾರೆ. ಅವರ ವಾದಗಳನ್ನು ಬೆಂಬಲಿಸುವಲ್ಲಿ

ಮಾನ್ಯ ವಕೀಲರು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಕೆಲವು ನಿರ್ಣಯಗಳನ್ನು ಅವಲಂಬಿಸಿದ್ದು, ಅವುಗಳ ಬಗ್ಗೆ ನಾನು ನಂತರ ಚರ್ಚೆಗೆ ಹೋಗುತ್ತೇನೆ.

8. ಮತ್ತೊಂದು ಕಡೆಯಲ್ಲಿ, ಉಚ್ಚ ನ್ಯಾಯಾಲಯದ ಸರ್ಕಾರಿ ವಕೀಲರು. ಈ ನ್ಯಾಯಾಲಯದ ಮುಂದೆ, ಮಾನ್ಯ ವಿಶೇಷ ನ್ಯಾಯಾಧೀಶರು ದಾಖಲೆಯಲ್ಲಿರುವ ಸಂಪೂರ್ಣ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡಿದ್ದು, ಅಪರಾಧದ ದಿನಾಂಕದಂದು ಅರ್ಜಿದಾರನು 18 ವರ್ಷಗಳಿಗಿಂತ ಹೆಚ್ಚಿನ ವಯಸ್ಸಿನವನಾಗಿದ್ದನೆನ್ನುವ ಕರಾರುವಾಕ್ಕಾದ ನಿರ್ಣಯಕ್ಕೆ ಬಂದಿರುವರೆಂದು ನಿವೇದಿಸಿದ್ದಾರೆ. ಆದುದರಿಂದ ಮಾನ್ಯ ವಿಶೇಷ ನ್ಯಾಯಾಧೀಶರು, ಈ ನ್ಯಾಯಾಲಯವು ಹೊರಡಿಸಿದ ಆದೇಶವನ್ನು ಕಟ್ಟುನಿಟ್ಟಾಗಿ ಅನುಸರಿಸಿದ್ದಾರೆ. ಆದುದರಿಂದ ಅಂಥ ಸಮಂಜಸ ಆದೇಶವನ್ನು ಯಾವುದೇ ಹಸ್ತಕ್ಷೇಪಕ್ಕೆ ತೆಗೆದುಕೊಳ್ಳಲಾಗುವುದಿಲ್ಲ. ಆದುದರಿಂದ ಅವರು ಅರ್ಜಿಯನ್ನು ವಜಾಗೊಳಿಸಲು ಕೋರಿದ್ದಾರೆ.

9. ನಾನು ದಾಖಲೆಯಲ್ಲಿರುವ ಸಾಕ್ಷ್ಯವನ್ನು ಈ ಅರ್ಜಿಯಲ್ಲಿರುವ ಪ್ರಶ್ನಿತ ಆದೇಶವನ್ನು ಎಚ್ಚರಿಕೆಯಿಂದ ಪರಿಶೀಲಿಸಿದ್ದೇನೆ. ಅರ್ಜಿದಾರನ ವಯಸ್ಸಿಗೆ ಸಂಬಂಧಪಟ್ಟಂತೆ ದಾಖಲೆಗಳಿಂದ ಕಂಡುಬರಬಹುದಾದಂತೆ ಎರಡು ಜೊತೆ ಸಂವಾದಿ ದಸ್ತಾವೇಜುಗಳು ಮತ್ತು ತಜ್ಞ ವೈದ್ಯರುಗಳ ಎರಡು ಸಂವಾದಿ ಅಭಿಪ್ರಾಯಗಳಿವೆ. ಹಾಜರುಪಡಿಸಲಾದ ಶಾಲಾ ದಾಖಲೆಗಳು (ನಿಶಾನೆ ಪಿ. 16 ರಿಂದ ಪಿ. 20) ಕಿರಿಯ ತಂಗಿಯ ಹುಟ್ಟಿದ ದಿನಾಂಕವನ್ನು 29.07.1997 ಎಂದು ತೋರಿಸಿರುವುದರಿಂದ 14.06.1997 ರಂತೆ ಅರ್ಜಿದಾರ / ಆಪಾದಿತನ ಹುಟ್ಟಿದ ದಿನಾಂಕವನ್ನು ತೋರಿಸುತ್ತವೆ. ಆದುದರಿಂದ, ಅರ್ಜಿದಾರ ಮತ್ತು ಆತನ ಕಿರಿಯ ತಂಗಿಯ ವಯಸ್ಸಿನ ನಡುವೆ $1^1/_2$ ತಿಂಗಳ ಅಲ್ಪ ವ್ಯತ್ಯಾಸವಿದೆ. ಆದುದರಿಂದ ವಿಶೇಷ ನ್ಯಾಯಾಲಯವು, ಅರ್ಜಿದಾರನ ವಯಸ್ಸನ್ನು ಶಾಲಾ ದಾಖಲೆಗಳಲ್ಲಿ ಸರಿಯಾಗಿ ನಮೂದಿಸಿಲ್ಲದಿರಬಹುದೆಂದು ಸಂದೇಹಪಪಟ್ಟಿದೆ. ಅಲ್ಲದೆ, ಅಧಿವಿಚಾರಣಾ ನ್ಯಾಯಾಲಯವು, ಸಾಕ್ಷ್ಯದ ಕ್ರಮದ ಅವಧಿಯಲ್ಲಿ ಆಪಾದಿತನ ಕೋರಿಕೆಯಂತೆ ಕೆಲವು ದಸ್ತಾವೇಜುಗಳಿಗೆ ಸಮನು ಮಾಡಿದ್ದು, ಅವುಗಳವು ನಿಶಾನೆ 35 ರಿಂದ 38 ಎಂದು ಗುರುತು ಮಾಡಲಾಗಿದೆ. ನಿಶಾನೆ 35 ರಿಂದ 38 ಇವು ದಾಖಲೆಗಳಾಗಿದ್ದು

ಅಂಗನವಾಡಿಯವರು ಎಂದರೆ ಅರ್ಜಿದಾರ ಮತ್ತು ಅವನ ತಂಗಿಯು ಜನಿಸಿದ ಅಂಗನವಾಡಿ ಅಧಿಕಾರವ್ಯಾಪ್ತಿಯೊಳಗೆ ಬರುವ ಮೆಹ್ಕರ್ ಗ್ರಾಮದ ಮೆಹ್ಕರ್ ಡಿ. ಕೇಂದ್ರ ಪ್ರಾಸಿಕ್ಯೂಷನ್ ಸಾಕ್ಷ್ಯ 19– ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ ಸದರಿ ರಿಜಿಸ್ಟರನ್ನು ಹಾಜರುಪಡಿಸಿದ್ದಾರೆ. ನಿಶಾನೆ ಪಿ. 31 ರಿಂದ 34 ರವರೆಗಿನ ನಿಶಾನೆಗಳು ವೈದ್ಯಕೀಯ ಪ್ರಮಾಣ ಪತ್ರವಾಗಿದ್ದು, ಅರ್ಜಿದಾರನ ದೈಹಿಕ ಪರೀಕ್ಷೆಯ ದಿನಾಂಕದಂದು ಇದ್ದಂತೆ ಅವನು 18 ವರ್ಷಗಳಿಗಿಂತ ಹೆಚ್ಚಿನ ವಯಸ್ಸಿನವನಾಗಿದ್ದನೆಂಬ ನಿರ್ಣಯಕ್ಕೆ ಬರುವ ಸಲುವಾಗಿ ಡಾ॥ ಕುಸುಮಾರವರು ಪ್ರಕ್ರಿಯೆಯನ್ನು ನಡೆಸಿರುತ್ತಾರೆ. ಮತ್ತೊಬ್ಬ ವೈದ್ಯರಾದ ಪ್ರಾ.ಸಾ. 8, ಇವರು ಸಹ, ನಿಶಾನೆ ಪಿ.7 ಎಂದು ಗುರುತು ಮಾಡಿದ ಪ್ರಮಾಣ ಪತ್ರವನ್ನು (ತನಿಖೆ ಅವಧಿಯಲ್ಲಿ ಪಡೆದುಕೊಳ್ಳಲಾಗಿದೆ) ನೀಡಿದ್ದು ಇದು, ಸದರಿ ವೈದ್ಯರು ಅರ್ಜಿದಾರನನ್ನು ದಂತ ವೈದ್ಯ ಮತ್ತು ರೇಡಿಯಾಲಜಿಸ್ಟ್ ಬಳಿಗೆ ಕಳುಹಿಸಿದ್ದರು ಮತ್ತು ಸದರಿ ವರದಿಗಳ ಆಧಾರದ ಮೇಲೆ ಆಪಾದಿತ ಅಪರಾಧದ ದಿನಾಂಕದಂದು ಇದ್ದಂತೆ 16 ರಿಂದ 17 ವರ್ಷಗಳ ನಡುವೆ ಇರುವಂತೆ ಅರ್ಜಿದಾರನ ವಯಸ್ಸನ್ನು ನೀಡಲಾಗಿತ್ತೆಂಬುದನ್ನು ತೋರಿಸುತ್ತದೆ. ತನಿಖೆಯ ಅವಧಿಯಲ್ಲಿ, ಪೊಲೀಸರು, ಅರ್ಜಿದಾರನ ಶಾಲಾ ಪ್ರಮಾಣ ಪತ್ರವನ್ನು ಸಹ ಸಂಗ್ರಹಿಸಿದ್ದು, ಇದನ್ನು 14.06.1997 ರಂದು ಇದ್ದಂತೆ ಆಪಾದಿತನ ಹುಟ್ಟಿದ ದಿನಾಂಕವನ್ನು ಬಹಿರಂಗಪಡಿಸುತ್ತದೆ. ನಿಶಾನೆ ಪಿ.16 ರಿಂದ 20 ಇವು ಸರ್ಕಾರಿ ಶಾಲೆ ಹೊರಡಿಸಿದ ಪ್ರಮಾಣ ಪತ್ರಗಳು ಎಂದರೆ ಪ್ರವೇಶಾತಿ ನಮೂನೆ, ಮೂಲ ವರ್ಗಾವಣೆ ಪತ್ರ ಮುಂತಾದವುಗಳಾಗಿದ್ದು, ಇವು, ಅರ್ಜಿದಾರನ ವಯಸ್ಸು ಅಪರಾಧದ ದಿನಾಂಕದಂದು ಇದ್ದಂತೆ 18 ವರ್ಷಗಳಿಗಿಂತ ಕಡಿಮೆಯಿರಲಿಲ್ಲವೆಂಬುದನ್ನು ತೋರಿಸುತ್ತವೆ. ಮೇಲಿನ ಸಂವಾದಿ ದಸ್ತಾವೇಜುಗಳು ಮತ್ತು ವೈದ್ಯರ ಸಂವಾದಿ ಅಭಿಪ್ರಾಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾನ್ಯ ವಿಶೇಷ ನ್ಯಾಯಾಧೀಶರು ಎಲ್ಲಾ ದಾಖಲೆಗಳನ್ನು ಪರಿಗಣಿಸಿದ್ದು, ಅರ್ಜಿದಾರನು ಆಪಾದಿತ ಅಪರಾಧದ ದಿನಾಂಕದಂದು ಇದ್ದಂತೆ ಅರ್ಜಿದಾರನು 18 ವರ್ಷಗಳಿಗಿಂತ ಹೆಚ್ಚಿನ ವಯಸ್ಸನ್ನು ದಾಟಿರಲಿಲ್ಲವೆಂಬ ನಿರ್ಣಯಕ್ಕೆ ಬಂದಿರುವರು. ಮಾನ್ಯ ವಿಶೇಷ ನ್ಯಾಯಾಧೀಶರು, ಯಾವ ಮುಖ್ಯ ಆಧಾರದ ಮೇಲೆ ನಿರ್ಣಯಕ್ಕೆ ಬಂದಿರುವರೋ ಅದು, ಹೀಗಿರುತ್ತದೆ, ಶಾಲಾ ಪ್ರಮಾಣ ಪತ್ರಗಳನ್ನು ದೋಷಾರೋಪ ಪಟ್ಟಿಯನ್ನು ಸಲ್ಲಿಸುವ ಸಮಯದಲ್ಲಿ ಹಾಜರುಪಡಿಸಿದ್ದರೂ ಕೂಡ, ತರುವಾಯದಲ್ಲಿ ನ್ಯಾಯಲಯದ ಮುಂದೆ ಕೆಲವು

ದಸ್ತಾವೇಜುಗಳನ್ನು ಸಮನು ಮಾಡಿದ್ದು, ಅವುಗಳನ್ನು ನಿಶಾನೆ 35 ರಿಂದ 38 ಎಂದು ಗುರುತುಮಾಡಲಾಗಿದೆ. ಮಾನ್ಯ ವಿಶೇಷ ನ್ಯಾಯಾಧೀಶರು, ಪಿ. 35 ರಿಂದ 38 ರವರೆಗಿನ ನಿಶಾನೆಗಳನ್ನು ವ್ಯವಹಾರದ ನಿಯತ ಕ್ರಮದಲ್ಲಿ ನಿರ್ವಹಿಸಲಾಗಿದೆಯೆಂಬುದನ್ನು ಪ್ರಾಸಾ-19 ತಿಳಿಸುತ್ತದೆಯೆಂಬುದನ್ನು ಗಮನಿಸಿದ್ದಾರೆ. ರಿಜಿಸ್ಟರಿನಲ್ಲಿ ಸೂಚಿಸಲಾದಂತೆ ನಿಶಾನೆ ಪಿ.36(ಎ) ಪ್ರಕಾರ ಆಪಾದಿತನ ತಾಯಿಯು, 18.06.1994 ರಂದು ಅರ್ಜಿದಾರನಿಗೆ ಜನ್ಮ ನೀಡಿರುತ್ತಾರೆಂಬುದನ್ನು ಪ್ರಾಸಾ 13 ತಿಳಿಸುತ್ತದೆ. ನಿಶಾನೆ ಪಿ.37 ರಲ್ಲಿ, ಮೆಹ್ಕರ್ ಗ್ರಾಮದಲ್ಲಿ ಹೊಸದಾಗಿ ಹುಟ್ಟಿದ ಮಕ್ಕಳ ಕುಟುಂಬದ ಸದಸ್ಯರ ಹೆಸರುಗಳನ್ನು ಸೂಚಿಸಲಾಗಿದ್ದು, ಇದು, ಆಪಾದಿತನ ತಂದೆ, ತಾಯಿ ಮತ್ತು ಸಹೋದರಿಯ ಹೆಸರುಗಳನ್ನು ಸಹ ತೋರಿಸುತ್ತದೆ. ಆ ದಸ್ತಾವೇಜುಗಳಲ್ಲಿ, ಅರ್ಜಿದಾರನ ಹುಟ್ಟಿದ ದಿನಾಂಕವನ್ನು 03.04.1995 ಎಂದು ತೋರಿಸಲಾಗಿತ್ತು. ಮಾನ್ಯ ವಿಶೇಷ ನ್ಯಾಯಾಧೀಶರು ಈ ದಸ್ತಾವೇಜುಗಳಲ್ಲಿ, ಅರ್ಜಿದಾರನ ಜನ್ಮ ದಿನಾಂಕಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ 1995ರ ಜಾಗದಲ್ಲಿ 1997 ಎಂದು, ಆಪಾದಿತನ ಸಹೋದರಿಗೆ ಸಂಬಂಧದಷ್ಟರ ಮಟ್ಟಿಗೆ 1999 ಎಂದು ತೋರಿಸುವ ಕೆಲವು ತಿದ್ದುಪಡಿಗಳಿವೆಯೆಂದು ಸಹ ಅಭಿಪ್ರಾಯಪಟ್ಟಿದ್ದಾರೆ. ನಿಸ್ಸಂದೇಹವಾಗಿ, ಈ ದಸ್ತಾವೇಜುಗಳನ್ನು, ದಂಡ ಪ್ರಕ್ರಿಯಾ ಸಂಹಿತೆಯ 91ನೇ ಪ್ರಕರಣದ ಮೇರೆಗೆ ಅರ್ಜಿಯನ್ನು ಸಲ್ಲಿಸುವ ಮೂಲಕ ಅರ್ಜಿದಾರನೇ ಪಡೆದುಕೊಂಡಿರುವನು. ಮಾನ್ಯ ವಿಶೇಷ ನ್ಯಾಯಾಧೀಶರು ನಿಶಾನೆ ಪಿ. 35 ರಿಂದ ನಿಶಾನೆ ಪಿ. 38ರ ವರೆಗಿನ ದಸ್ತಾವೇಜುಗಳನ್ನು, ನಿಯತ ವ್ಯವಹಾರದ ಕ್ರಮದ ಅವಧಿಯಲ್ಲಿ ನಿರ್ವಹಿಸಿದ್ದಾರೆ. ಆದುದರಿಂದ ಅವರು, ಭಾರತೀಯ ಸಾಕ್ಷ್ಯ ಅಧಿನಿಯಮದ 35ನೇ ಪ್ರಕರಣದ ಮೇರೆಗೆ ಒಪ್ಪಿಕೊಂಡಿರುವರೆಂದು ಅಭಿಪ್ರಾಯಪಟ್ಟಿರುವರು. ಆದರೆ, ನೋಡಬಹುದಾದಂತೆ, ಮಾನ್ಯ ವಿಶೇಷ ನ್ಯಾಯಾಧೀಶರೇ ಆ ದಸ್ತಾವೇಜುಗಳ ನಿರ್ವಹಣೆಗೆ ಸಂಬಂದಿಸಿದಂತೆ ತಮ್ಮ ಸಂದೇಹವನ್ನು ವ್ಯಕ್ತಪಡಿಸಿದ್ದಾರೆ. ಆದೇಶದಲ್ಲಿ ಹಲವು ಸ್ಥಳಗಳಲ್ಲಿ ಯಾರೋ ನಿಶಾನೆ ಪಿ.35 ರಿಂದ ಪಿ.38ರವರೆಗಿನ ದಸ್ತಾವೇಜುಗಳನ್ನು ದುರುದ್ದೇಶದಿಂದ ಬದಲಿಸಲು ಪ್ರಯತ್ನಿಸಿರುವುದನ್ನು ಗಮನಿಸಿದ್ದಾರೆ. ಅರ್ಜಿದಾರನ ಮತ್ತು ಆತನ ಸಹೋದರಿಯ ಹುಟ್ಟಿದ ದಿನಾಂಕ ಮತ್ತು ವರ್ಷವನ್ನು ಸದರಿ ದಸ್ತಾವೇಜುಗಳಲ್ಲಿ ಬದಲಾಯಿಸಲು ಪ್ರಯತ್ನಿಸಲಾಗಿದೆ. ಅಂಥ ಹಸ್ತಕ್ಷೇಪವು, ಸದರಿ ದಸ್ತಾವೇಜುಗಳು

ಯಾರೋ ದುರುದ್ದೇಶದಿಂದ ಬದಲಾವಣೆಗೊಳಪಟ್ಟಿದ್ದವೆಂಬುದು ಇನ್ನು ಅಂಥ ದಸ್ತಾವೇಜುಗಳನ್ನು ಭಾರತೀಯ ಸಾಕ್ಷ್ಯ ಅಧಿನಿಯಮದ 3ನೇ ಪ್ರಕರಣದ ಮೇರೆಗೆ ಅವಲಂಬಿಸಬಹುದಾಗಿದೆಯೇ ಮತ್ತು ಆ ದಸ್ತಾವೇಜುಗಳನ್ನು ಬದಲಾಯಿಸಲು ಯಾವುದೇ ಅವಕಾಶಲ್ಲದೆ ವ್ಯವಹಾರದ ನಿಯತ ಕ್ರಮದಲ್ಲಿ ಅವುಗಳನ್ನು ನಿರ್ವಹಿಸಲಾಗಿದೆಯೆಂದು ಇನ್ನೂ ಹೇಳಬಹುದಾಗಿದೆಯೇ ಎಂಬುದು ಮಾನ್ಯ ವಿಶೇಷ ನ್ಯಾಯಾಧೀಶರ ಗಮನ ಸೆಳೆದಿದೆ. ಮಾನ್ಯ ವಿಶೇಷ ನ್ಯಾಯಾಧೀಶರು ಮುಖ್ಯವಾಗಿ ಈ ದಸ್ತಾವೇಜುಗಳಲ್ಲಿ ಮತ್ತು ಎರಡನೇ ಬಾರಿಗೆ ಎಂದರೆ ಪ್ರಾಸಾ–18 ಡಾ॥ ಕುಸುಮಾರ (ನಿಶಾನೆ ಪಿ.31 ರಿಂದ 34) ಸಾಕ್ಷ್ಯದ ಸಂಬಂಧ ವೈದ್ಯರು ನೀಡಿದ ಅಭಿಪ್ರಾಯದ ಮೇಲೆ ಲಕ್ಷ್ಯ ಹರಿಸಿದ್ದಾರೆ. ಮಾನ್ಯ ವಿಶೇಷ ನ್ಯಾಯಾಧೀಶರು, ದಸ್ತಾವೇಜುಗಳು ಎಂದರೆ ತನಿಖೆಯ ಕ್ರಮದ ಅವಧಿಯಲ್ಲಿ ಪೊಲೀಸರು ಸಂಗ್ರಹಿಸಿರುವ ಮತ್ತು ದೋಷಾರೋಪ ಪಟ್ಟಿಯೊಂದಿಗೆ ಹಾಜರುಪಡಿಸಿರುವ ಶಾಲಾ ಪ್ರಮಾಣ ಪತ್ರಗಳನ್ನು ಆ ದಸ್ತಾವೇಜುಗಳನ್ನು ವ್ಯವಹರಣೆ ನಿಯತ ಕ್ರಮದ ಅವಧಿಯಲ್ಲಿ ನಿರ್ವಹಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಲು ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮದ 35ನೇ ಪ್ರಕರಣವನ್ನು ಆ ದಸ್ತಾವೇಜುಗಳಿಗೆ ಅನ್ವಯಿಸಬಹುದೇ ಅಥವಾ ಇಲ್ಲವೇ ಎಂಬುದನ್ನು ಖಚಿತಪಡಿಸಿಕೊಳ್ಳಲೂ ಕೂಡ ಅವುಗಳ ಸತ್ಯಾಸತ್ಯತೆಯನ್ನು ಸ್ಥೂಲವಾಗಿ ಪ್ರಸ್ತಾಪಿಸಿಲ್ಲ. ಮಾನ್ಯ ವಿಶೇಷ ನ್ಯಾಯಾಧೀಶರು, ಶಾಲೆಗೆ ಮಕ್ಕಳನ್ನು ಸೇರಿಸುವಾಗ ತಂದೆತಾಯಿಗಳು ಮಕ್ಕಳ ವಯಸ್ಸಿನ ವಾಸ್ತವಿಕ ವಯಸ್ಸಿಗಿಂತ ಭಿನ್ನವಾದ ವಯಸ್ಸನ್ನು ನೀಡಿರಬಹುದು, ಅನೇಕ ಸಂದರ್ಭಗಳಲ್ಲಿ ಹೀಗಾಗುತ್ತದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ನನ್ನ ಅಭಿಪ್ರಾಯದಲ್ಲಿ, ಮಕ್ಕಳ ಪ್ರವೇಶಾತಿಗೆ (ಅರ್ಜಿದಾರ ಮತ್ತು ಅವನ ಸಹೋದರಿ) ಸಂಬಂಧಿಸಿದಂತೆ ಮತ್ತು ನಿಶಾನೆ ಪಿ. 16 ರಿಂದ ಪಿ. 20 ರವರೆಗಿನ ದಸ್ತಾವೇಜುಗಳಲ್ಲಿ ನಮೂದುಗಳನ್ನು ಹೇಗೆ ಮಾಡಲಾಗಿತ್ತು ಎಂಬ ಬಗ್ಗೆ ಶಾಲಾ ದಾಖಲೆಗಳನ್ನು ತರಿಸಿಕೊಳ್ಳದೆಯೂ ಮಾನ್ಯ ನ್ಯಾಯಾಧೀಶರು ತಂಬಾ ಸಾಮಾನ್ಯವಾದ ಅಭಿಪ್ರಾಯವನ್ನು ತಳೆದಿರಬಹುದು ಪಿ.16 ರಿಂದ ಪಿ.20 ರವರೆಗಿನ ನಿಶಾನೆಗಳಿಗೆ ಸಂಬಂಧಪಟ್ಟಂತೆ ಮಾನ್ಯ ವಿಶೇಷ ನ್ಯಾಯಾಧೀಶರು ಯಾವುದೇ ಸಂದೇಹವನ್ನು ಪಟ್ಟಿದ್ದರೆ. ಅವರು ಶಾಲಾ ಪ್ರಾಧಿಕಾರಗಳಿಂದ ಪ್ರವೇಶ ರಿಜಿಸ್ಟರಿನಂಥ ಮತ್ತು ಸಕ್ಷಮ ಪ್ರಾಧಿಕಾರಗಳಿಂದ ಹುಟ್ಟಿದ ರಿಜಿಸ್ಟರಿನಂಥ ಶಾಲಾ ಮೂಲ ದಾಖಲೆಗಳನ್ನು ತರಿಸಿಕೊಳ್ಳಬಹುದಾಗಿದ್ದು,

ಆನಂತರ ಅವರು ನಿರ್ಣಯವನ್ನು ತೆಗೆದುಕೊಳ್ಳಬಹುದಿತ್ತು. ಮಾನ್ಯ ವಿಶೇಷ ನ್ಯಾಯಾಧೀಶರು ತಳೆದ ಸಾಮಾನ್ಯ ಅಭಿಪ್ರಾಯವನ್ನು ಒಪ್ಪಿಕೊಳ್ಳುವುದಾದರೆ, ಯಾವುದೇ ರೀತಿಯಲ್ಲಿ ನ್ಯಾಯಾಲಯವು ಶಾಲಾ ದಾಖಲೆಗಳನ್ನು ಅವಲಂಬಿಸಬೇಕಾಗಿಲ್ಲ. ಆದುದರಿಂದ ಮಕ್ಕಳನ್ನು ಶಾಲೆಗೆ ಸೇರಿಸುವಾಗ ತಂದೆತಾಯಿಗಳು ಮಕ್ಕಳ ವಾಸ್ತವಿಕ ವಯಸ್ಸಿಗಿಂತ ತಪ್ಪಾದ ವಯಸ್ಸನ್ನು ನೀಡುವರೇ ಎಂಬ ಬಗ್ಗೆ ದಾಖಲೆಯಲ್ಲಿ ಲಭ್ಯವಿರುವ ಸಾಕ್ಷ್ಯಗಳ ಆಧಾರದ ಮೇಲೆ ಪ್ರತಿಯೊಂದು ಪ್ರಕರಣವನ್ನು ಪರೀಕ್ಷಿಸಬೇಕಾಗುತ್ತದೆ. ಆದುದರಿಂದ ಮಾನ್ಯ ವಿಶೇಷ ನ್ಯಾಯಾಧೀಶರು ಪಿ.35 ರಿಂದ ಪಿ.38 ರವರೆಗಿನ ನಿಶಾನೆಗಳಿಗೆ ಸಂಬಂಧಪಟ್ಟಂತೆ ಕೆಲವು ಸಂದೇಹಗಳನ್ನು ವ್ಯಕ್ತಪಡಿಸಿದ್ದಾರೆ, ಆದರೆ ಪ್ರಾಸಾ. 18 ಹೊರಡಿಸಿದ ಎರಡನೇ ವೈದ್ಯಕೀಯ ಪ್ರಮಾಣ ಪತ್ರದೊಂದಿಗೆ ಅದನ್ನು ಸೇರಿಸಿರುವುದನ್ನು ಅವಲಂಬಿಸಿದ್ದಾರೆ ನನ್ನ ಅಭಿಪ್ರಾಯದಲ್ಲಿ ಇದು ಸರಿಯಲ್ಲ.

11. ಮೌಲ್ಯಮಾಪನ ಮಾಡುವ ಸಲುವಾಗಿ ಮತ್ತು ಈ ಪ್ರಕರಣದಲ್ಲಿನ ದಸ್ತಾವೇಜುಗಳನ್ನು ನಿರ್ದಿಷ್ಟವಾಗಿ ನಿಶಾನೆ ಪಿ. 35 ರಿಂದ ಪಿ. 38 ರವರೆಗಿನ ನಿಶಾನೆಗಳನ್ನು ಒಪ್ಪಿಕೊಳ್ಳುವ ಮೊದಲು ನ್ಯಾಯಾಲಯವು ತುಂಬಾ ಎಚ್ಚರಿಕೆ ಮತ್ತು ಜಾಗರೂಕತೆಯಿಂದ ಇರಬೇಕಾಗುತ್ತದೆ. ನ್ಯಾಯಾಲಯವು ಅಂಥ ದಸ್ತಾವೇಜುಗಳನ್ನು ಅವಲಂಬಿಸುವ ಮೊದಲು ಆ ದಸ್ತಾವೇಜುಗಳ ಅಂಗೀಕಾರಾರ್ಹತೆಯನ್ನು ಮತ್ತು ನಂಬಿಕಾರ್ಹತೆಯನ್ನು ನೋಡಬೇಕಾಗುತ್ತದೆ. ಅಂಥ ದಸ್ತಾವೇಜಿನ ಯಾವುದೇ ಭಾಗದ ನಂಬಿಕೆಗೆ ಸಂಬಂಧಪಟ್ಟಂತೆ ಯಾವುದೇ ಅಭಿಪ್ರಾಯವನ್ನು ನ್ಯಾಯಾಲಯವು ತಳೆಯುವ ಮೊದಲು, ನ್ಯಾಯಾಲಯವು, ಅಂಥ ದಸ್ತಾವೇಜುಗಳನ್ನು, ಅವುಗಳ ವ್ಯಾಪ್ತಿಗೆ ಮಾತ್ರ ಬದಲಾಯಿಸಲು ಪ್ರಯತ್ನಿಸಲಾಗಿದೆಯೇ, ಅವುಗಳನ್ನು ನ್ಯಾಯಾಲಯವು ಅವಲಂಬಿಸಲು ಬಯಸಿದೆಯೇ ಎಂಬುದನ್ನು ಅಥವಾ ಸಂಪೂರ್ಣ ದಸ್ತಾವೇಜು ಅಂಥ ಬದಲಾವಣೆಗೆ ಅಥವಾ ತಿದ್ದುಪಾಟಿಗೆ ಒಳಪಟ್ಟಿದೆಯೇ ಎಂಬ ಬಗ್ಗೆ ದಸ್ತಾವೇಜನ್ನು ಸಂಪೂರ್ಣವಾಗಿ ಅವಗಾಹಿಸಿದ ನಂತರ ತನ್ನ ವಿವೇಚನೆಯನ್ನು ನ್ಯಾಯಿಕವಾಗಿ ಅನ್ವಯಿಸಬೇಕು. ಎಲ್ಲಾ ಕುತೂಹಲಗಳೊಂದಿಗೆ ನಾನು, ನಿಶಾನೆ ಪಿ.35 ರಿಂದ ಪಿ. 38ರ ವರೆಗಿನ ದಸ್ತಾವೇಜುಗಳನ್ನು ಪರಿಶೀಲಿಸಿರುತ್ತೇನೆ. ಪ್ರತಿಯೊಂದು ಮತ್ತು ಪ್ರತೀ ದಸ್ತಾವೇಜಿನಲ್ಲಿ

ಪ್ರತಿಯೊಂದು ಪುಟದಲ್ಲಿ ತಿದ್ದುಪಡಿಗಳಿವೆ ಮತ್ತು ಅದರಲ್ಲಿನ ನಮೂದುಗಳಲ್ಲಿ ಗೆರೆಗಳನ್ನು ಎಳೆಯಲಾಗಿದೆ. ಇನ್ನು ವಿವಾದಾಂಶವೇನೆಂದರೆ ವಿವಾದಿತ ನಮೂದುಗಳ ಸುತ್ತ ಗೌಪ್ಯತೆ ಮುಚ್ಚಿರುವಾಗ ಅಂಥ ದಸ್ತಾವೇಜುಗಳನ್ನು ನ್ಯಾಯಾಲಯವು ಅವಲಂಬಿಸಬಹುದೇ ನಿಶಾನೆ ಪಿ.35 ರಿಂದ ಪಿ.38 ನ್ನು ಸಕ್ಷಮ ವ್ಯಕ್ತಿಯು ಹಾಜರುಪಡಿಸಿದ್ದಾನೆ ಆದರೂ, ಮಾನ್ಯ ವಿಶೇಷ ನ್ಯಾಯಾಧೀಶರು, ತಮ್ಮ ನ್ಯಾಯಿಕ ವಿವೇಚನೆಯನ್ನು ಅನ್ವಯಿಸಿಲ್ಲ ಮತ್ತು ಸಂಪೂರ್ಣ ದಸ್ತಾವೇಜನ್ನು ನೋಡುವ ಯಾವುದೇ ಪ್ರಯತ್ನವನ್ನು ಮಾಡಿಲ್ಲ ಆದರೆ ಅವರು ದಸ್ತಾವೇಜಿನ ವಿವಾದಿತ ಭಾಗವನ್ನು ಮಾತ್ರ ಅವಲಂಬಿಸಿದ್ದಾರೆ ಮತ್ತು ಸದರಿ ದಸ್ತಾವೇಜನ್ನು ದುರುದ್ದೇಶದಿಂದ ತಿದ್ದಲು ಪ್ರಯತ್ನಿಸಲಾಗಿತ್ತು ಎಂಬುದನ್ನು ಗಮನಿಸಿದ್ದಾರೆ. ಅಲ್ಲದೆ, ಅದರ ಜೊತೆಗೆ, ಈ ನಿರ್ದಿಷ್ಟ ದಸ್ತಾವೇಜನ್ನು ತಿದ್ದಿರುವಾಗ ಅಥವಾ ದಸ್ತಾವೇಜನ್ನು ತಿದ್ದಲು ಪ್ರಯತ್ನಿಸಿರುವಾಗ ಸದರಿ ದಸ್ತಾವೇಜುಗಳನ್ನು ಯಾರು ತಿದ್ದಿರುವರು ಎಂಬ ಬಗ್ಗೆ ಮಾನ್ಯ ವಿಶೇಷ ನ್ಯಾಯಾಧೀಶರು ಯಾವುದೇ ನಿರ್ಣಯವನ್ನು ನೀಡಿರುವುದಿಲ್ಲ. ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಇತರ ದಸ್ತಾವೇಜುಗಳು, ನಿಶಾನೆ ಪಿ.16 ರಿಂದ ಪಿ.20 ರ ವರೆಗಿನ ದಸ್ತಾವೇಜುಗಳಲ್ಲಿ ಗುರುತು ಮಾಡಲಾಗಿರುವ ಶಾಲಾ ಪ್ರಮಾಣ ಪತ್ರಗಳು, ಅಂಕಪಟ್ಟಿಗಳು, ವರ್ಗಾವಣೆ ಪತ್ರ, ಪ್ರವೇಶಾತಿ ನಮೂನೆ ಮುಂತಾದವುಗಳಂಥ ದಸ್ತಾವೇಜುಗಳನ್ನು ಸಕ್ಷಮ ಪ್ರಾಧಿಕಾರಗಳು ಹೊರಡಿಸಿವೆಯೆಂಬುದನ್ನು ತೋರಿಸುತ್ತವೆ. ನ್ಯಾಯಾಲಯವು, ಪ್ರಕರಣವನ್ನು ದಾಖಲಿಸಿದ ನಂತರ ಮಾತ್ರ ನಿಶಾನೆ ಪಿ.35 ರಿಂದ ಪಿ.38 ರವರೆಗಿನ ದಸ್ತಾವೇಜುಗಳನ್ನು ತಿದ್ದಲಾಗಿದೆಯೆಂಬ ನಿರ್ಣಯಕ್ಕೆ ಬಂದ ಹೊರತು ನ್ಯಾಯಾಲಯವು, ನಿಶಾನೆ 35 ರಿಂದ ಪಿ. 38 ರವರೆಗಿನ ದಸ್ತಾವೇಜುಗಳಲ್ಲಿ ಮಾಡಲಾದ ನಮೂದುಗಳನ್ನು ಅವಲಂಬಿಸಬಹುದು ಎಂಬ ಅಂಥ ಯಾವುದೇ ನಿರ್ಣಯವನ್ನು ನ್ಯಾಯಾಲಯವು ನೀಡಲು ಸಾಧ್ಯವಿಲ್ಲ. ಈ ಸಂಬಂಧದಲ್ಲಿಯೂ ಕೂಡ ನ್ಯಾಯಾಲಯವು ನೀಡಲು ಸಾಧ್ಯವಿಲ್ಲ. ಈ ಸಂಬಂಧದಲ್ಲಿಯೂ ಕೂಡ ನ್ಯಾಯಾಲಯವು, ನಿಶಾನೆ ಪಿ.35 ರಿಂದ ಪಿ.38 ರೊಂದಿಗೆ ಹೋಲಿಸಿ ನಿಶಾನೆ ಪಿ.16 ರಿಂದ ಪಿ.20ರ ವರೆಗಿನ ದಸ್ತಾವೇಜುಗಳ ಸತ್ಯತೆಯನ್ನು ಪರೀಕ್ಷಿಸುವ ಸಲುವಾಗಿ ಸಕ್ಷಮ ಪ್ರಾಧಿಕಾರಗಳಿಂದ ಮೂಲ ಜನನ ರಿಜಿಸ್ಟರ್ ಅಥವಾ ಮೂಲ ಪ್ರವೇಶ ರಿಜಿಸ್ಟರನ್ನು

ಪಡೆದುಕೊಳ್ಳಲೇಬೇಕಾಗುತ್ತದೆ. ಈ ಪ್ರಕರಣಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಮಾನ್ಯ ವಿಶೇಷ ನ್ಯಾಯಾಧೀಶರು ಅದನ್ನು ಮಾಡಿರುವುದಿಲ್ಲ.

12. ಸಹಜವಾಗಿ, ದಾಖಲೆಯಲ್ಲಿರುವ ಸಾಕ್ಷ್ಯದ ಆಧಾರದ ಮೇಲೆ ಯಾವುದೇ ಸಂದೇಹ ಉದ್ಭವಿಸಿದರೆ, ನ್ಯಾಯಾಲಯವು, ಆಪಾದಿತನ ವಯಸ್ಸನ್ನು ದೃಢಪಡಿಸಿಕೊಳ್ಳುವ ಸಲುವಾಗಿ ಅರ್ಜಿದಾರನನ್ನು / ಆಪಾದಿತನನ್ನು ಮತ್ತೊಮ್ಮೆ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಬಹುದು. ಈ ಸಂಬಂಧದಲ್ಲಿ ಆಪಾದಿತನನ್ನು ವೈದ್ಯಕೀಯವಾಗಿ ಪರೀಕ್ಷೆಗೊಳಪಡಿಸುವ ಉದ್ದೇಶಕ್ಕಾಗಿ, ಕಾನೂನಿನ ಅಡಿಯಲ್ಲಿ ಉದ್ದೇಶಿಸಲಾದ ಕೆಲವು ಪ್ರಕ್ರಿಯೆಗಳಿದ್ದು, ಅವುಗಳನ್ನು ಸೂಚಿಸುವುದು ತಕ್ಕುದಾಗಿರುತ್ತದೆ. ಆ ಕಾನೂನು ಅಂಶಗಳು ಅನುಸಾರವಾಗಿಲ್ಲದಿದ್ದರೆ ಅಥವಾ ಈಡೇರದಿದ್ದರೆ ಆಗ ನ್ಯಾಯಾಲಯವು ಅಂಥ ವೈದ್ಯಕೀಯ ವರದಿಗಳನ್ನು ಮಾತ್ರ ಅವಲಂಬಿಸಬಹುದಾಗಿದೆ.

13. ಪ್ರಾಸಾ. 8 (ವೈದ್ಯರು) ನಿಶಾನೆ ಪಿ.7ನ್ನು ಹಾಜರುಪಡಿಸಿದ್ದು, ಅದು ಸದರಿ ವೈದ್ಯರು ಆಪಾದಿತನನ್ನು ದಂತವೈದ್ಯರು ಮತ್ತು ರೇಡಿಯಾಲಜಿಸ್ಟ್ ರವರ ಬಳಿಗೆ ಕಳಿಸಿರುವುದನ್ನು ತೋರಿಸುತ್ತಿರುವುದು ದಾಖಲೆಗಳಿಂದ ಕಂಡುಬರುತ್ತದೆ ಮತ್ತು ಅವರ ವರದಿಗಳನ್ನಾಧರಿಸಿ ಅವರು ಆಪಾದಿತನ ವಯಸ್ಸು ಅಪರಾಧದ ದಿನಾಂಕದಂದು ಇದ್ದಂತೆ ಆಪಾದಿತನು 16 ರಿಂದ 17 ವರ್ಷಗಳ ನಡುವೆ ಇದೆಯೆಂಬ ತೀರ್ಮಾನಕ್ಕೆ ಬಂದಿರುತ್ತಾರೆ. ಸದರಿ ವೈದ್ಯರು ವಯಸ್ಸನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಯಾವ ಪರೀಕ್ಷೆಗಳನ್ನು ನಡೆಸಿದರು ಎಂಬ ಆಧಾರದ ಮೇಲೆ ಸಾಕ್ಷ್ಯದ ತುಣಕನ್ನು ಮಾನ್ಯ ವಿಶೇಷ ನ್ಯಾಯಾಧೀಶರು ತಿರಸ್ಕರಿಸಿದ್ದಾರೆ. ಮಾನ್ಯ ವಿಶೇಷ ನ್ಯಾಯಾಧೀಶರು, ಪ್ರಾಸಾ. 18 – ಡಾ॥ ಕುಸುಮಾರವರ ಸಾಕ್ಷ್ಯದೊಂದಿಗೆ ಸದರಿ ಸಾಕ್ಷ್ಯವನ್ನು ಹೋಲಿಸಿದ್ದು, ಆಕೆ, ಅರ್ಜಿದಾರನ ವಯಸ್ಸನ್ನು ದೃಢೀಕರಿಸಲು ವೈದ್ಯಕೀಯ ಕ್ಷೇತ್ರದ ಅಡಿಯಲ್ಲಿ ಉದ್ದೇಶಿಸಲಾದಂಥ ಪರೀಕ್ಷೆಗಳನ್ನು ನಡೆಸಿರುವರೆಂಬ ಮತ್ತು ಆಕೆ ನಿಶಾನೆ ಪಿ.31 ರಿಂದ ಪಿ.34 ರವರೆಗೆ ಸಂಬಂಧಪಟ್ಟ ವಿವರಗಳನ್ನು ನೀಡಿರುವರೆಂದು ಮತ್ತು ಅರ್ಜಿದಾರನ ವಯಸ್ಸಿಗೆ ಸಂಬಂಧಿಸಿದಂತೆ ಹಸ್ತಕ್ಷೇಪವನ್ನು ಮಾಡಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಇಲ್ಲಿ, ವೈದ್ಯರು (ಪ್ರಾಸಾ.8)

ಅರ್ಜಿದಾರನನ್ನು ದಂತವೈದ್ಯರ ಬಳಿ ಮತ್ತು ರೇಡಿಯಾಲಜಿಸ್ಟ್ ಬಳಿ ಕಳುಹಿಸಿರುವಾಗ, ಅರ್ಜಿದಾರನ ವಯಸ್ಸನ್ನು ನಿರ್ಧರಿಸುವ ಆ ವ್ಯಕ್ತಿಗಳು ನಡೆಸುವ ಪರೀಕ್ಷೆಗಳ ಬಗ್ಗೆ ಅವನು ಹೇಗೆ ವಿವರಿಸಲು ಸಾಧ್ಯ ಎಂಬುದನ್ನು ನೇರವಾಗಿ ತಿಳಿಸಿದ್ದಾರೆ. ಆಪಾದಿತನ ವಯಸ್ಸನ್ನು ನಿರ್ಧರಿಸುವ ತಜ್ಞರು ಮಾತ್ರ ಮಾತನಾಡಬೇಕಾಗುತ್ತದೆ. ದಂತವೈದ್ಯರು ಮತ್ತು ರೇಡಿಯಾಲಜಿಸ್ಟ್‌ಗಳೂ ನೀಡಿರುವ ಪ್ರಮಾಣ ಪತ್ರಗಳನ್ನು ದೋಷಾರೋಪ ಪಟ್ಟಿಯೊಂದಿಗೆ ಪೊಲೀಸರು ನೀಡಿರುವುದಿಲ್ಲ. ಈ ಮೊದಲು ಅವರ ವರದಿಯನ್ನು ನೀಡಿರುವ ಸದರಿ ದಂತವೈದ್ಯರು ಅಥವಾ ರೇಡಿಯಾಲಜಿಸ್ಟ್ ರವರನ್ನು ಅವರು ಉಲ್ಲೇಖಿಸಿಲ್ಲ ಮತ್ತು 16 ರಿಂದ 17 ವರ್ಷಗಳ ನಡುವಿನ ಅರ್ಜಿದಾರನ ವಯಸ್ಸನ್ನು ನಿರ್ಧರಿಸುವ ಅಂಥ ಪ್ರಮಾಣ ಪತ್ರಗಳನ್ನು ಯಾವ ಆಧಾರದ ಮೇಲೆ ಅವರು ನೀಡಿರುವರು ಎಂಬುದನ್ನು ದೃಢಪಡಿಸುವ ಉದ್ದೇಶಕ್ಕಾಗಿ ಆ ವೈದ್ಯರುಗಳಿಂದ ಮಾಹಿತಿ ಪಡೆದುಕೊಳ್ಳುವ ಯಾವುದೇ ಪ್ರಯತ್ನಗಳನ್ನು ನ್ಯಾಯಾಲಯವೂ ಕೂಡ ಮಾಡಿರುವುದಿಲ್ಲ. ಅರ್ಜಿದಾರನ ಅಂದಾಜು ಅಥವಾ ಸರಿಯಾದ ವಯಸ್ಸನ್ನು ಸ್ಪಷ್ಟಪಡಿಸುವ ಗುರುತರ ಜವಾಬ್ದಾರಿ ನ್ಯಾಯಾಲಯದ ಬಗಲಿಗಿರುವಾಗ, ನ್ಯಾಯಾಲಯವು ಅರ್ಜಿದಾರನ ವಯಸ್ಸಿಗೆ ಸಂಬಂಧಿಸಿದಂತೆ ಸವಿವರವಾಗಿ ಅಂಥ ಅಸಂಗತತೆಯೊಂದಿಗೆ ನ್ಯಾಯಾಲಯವು ವ್ಯವಹರಿಸಬೇಕು. ವಾಸ್ತವವಾಗಿ, ಈ ನ್ಯಾಯಾಲಯವು ಯಾಕೆ ಈ ವಿಷಯವನ್ನು, ಅರ್ಜಿದಾರನ ವಯಸ್ಸನ್ನು ನಿರ್ಧರಿಸುವ ಸೀಮಿತ ಉದ್ದೇಶಕ್ಕಾಗಿ, ಎಲ್ಲಾ ಅಗತ್ಯ ಸಾಕ್ಷಿದಾರರ ಸಾಕ್ಷ್ಯವನ್ನು ದಾಖಲಿಸುವ ಸೂಚನೆಯನ್ನು ನೀಡುವ ಹಿಂದಿನ ಸಂದರ್ಭದ ಆಧಾರದ ಮೇಲೆ ಮಾನ್ಯ ವಿಶೇಷ/ ಸೆಷನ್ಸ್ ನ್ಯಾಯಾಧೀಶರಿಗೆ ಕಳಿಸಿದರು ಎಂಬುದು ಕಾರಣವಾಗಿದೆ. ಆದರೆ ಅವನು, ಪ್ರಾಸಾ–8 ಅಂಥ ಯಾವುದೇ ವಿವರಗಳನ್ನು ನೀಡಿರಲಿಲ್ಲವೆಂಬುದನ್ನು ಸರಳವಾಗಿ ತಿಳಿಸಿದ್ದಾನೆ. ಸಹಜವಾಗಿ, ಪ್ರಾಸಾ.18 – ಡಾ॥ ಕುಸುಮಾರವರು, ಅರ್ಜಿದಾರನ ವಯಸ್ಸನ್ನು ಅವರು ನಿರ್ಧರಿಸುವ ಮೂಲಕ ಪ್ರಕ್ರಿಯೆಗೆ ಸಂಬಂಧಪಟ್ಟ ವಿವರಗಳನ್ನು ನೀಡಿರುತ್ತಾರೆ.

14. ವೈದ್ಯರುಗಳ ಸಾಕ್ಷ್ಯ ಎಂದರೆ ಪ್ರಾಸಾ–8 ಮತ್ತು ಪ್ರಾಸಾ–18 ಮತ್ತು ಅವರು ಒಟ್ಟಿಗೆ ಒದಗಿಸಿದ ದಸ್ತಾವೇಜುಗಳ ಸಾಕ್ಷ್ಯವು ಕಾನೂನಿನ ನ್ಯಾಯಾಲಯದ ಮುಂದೆ ಅಂಗೀಕಾರಾರ್ಹ ಸಾಕ್ಷ್ಯದ ಸ್ವರೂಪದಲ್ಲಿವೆಯೇ ಎಂಬ ಪ್ರಶ್ನೆ ಈಗ

ಉದ್ಭವಿಸಿದೆ. ಈ ಸಂಬಂಧದಲ್ಲಿ, ಮಾನ್ಯ ವಕೀಲರಾದ ಶ್ರೀ ಸಂಜಯ್ ಎ. ಪಾಟೀಲ್ ರವರು, ಸದರಿ ವೈದ್ಯರುಗಳು ಅಂಥ ಪ್ರಮಾಣ ಪತ್ರಗಳನ್ನು ನೀಡಲು ಸಕ್ಷಮರಾಗಿಲ್ಲವೆಂದು ಏಕೆಂದರೆ, ವೈದ್ಯಕೀಯ ಮಂಡಳಿಯು ಅಂಥ ಪ್ರಮಾಣ ಪತ್ರವನ್ನು ನೀಡಲು ಸಕ್ಷಮ ಪ್ರಾಧಿಕಾರವಾಗಿವೆ ಎಂಬುದನ್ನು ಕಾನೂನನ್ನು ಉದ್ದೇಶಿಸುತ್ತದೆಯೆಂದು ಗಂಭೀರವಾಗಿ ವಾದಿಸಿದ್ದಾರೆ ಮತ್ತು ಅಂಥ ಶಾಸನಬದ್ಧ ಅಗತ್ಯತೆಯನ್ನು ಪೂರ್ತಿಗೊಳಿಸದಿದ್ದರೆ, ಪ್ರಾಸಾ–8 ಅಥವಾ ಪ್ರಾಸಾ–18 ಹಾಜರುಪಡಿಸಿದ ದಸ್ತಾವೇಜುಗಳನ್ನು ಯಾವುದೇ ಉದ್ದೇಶಕ್ಕಾಗಿ ಬಳಸಬಹುದಾಗಿರುವುದಿಲ್ಲ.

15. ಈಗ ಸದರಿ ದೃಷ್ಟಿಕೋನಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ ಪರಿಶೀಲಿಸೋಣ. ಸಹಜವಾಗಿ, ಈ ಪ್ರಕರಣದಲ್ಲಿ ಎರಡು ಸಂವಾದಿ ದಸ್ತಾವೇಜುಗಳು ಮತ್ತು ಎರಡು ಸಂವಾದಿ ಅಭಿಪ್ರಾಯಗಳು ಲಭ್ಯವಾಗುತ್ತವೆ. ಆದುದರಿಂದ, ಈ ಸಂಬಂಧದಲ್ಲಿ ಕಾನೂನು ನಿಖರವಾಗಿ ಏನನ್ನು ಹೇಳುತ್ತದೆ ಎಂಬುದನ್ನು ನೋಡೋಣ. ಅದರ ಸಂಬಂಧದಲ್ಲಿ ಇಲ್ಲಿ, ಬಾಲಕ ನ್ಯಾಯ ಮಂಡಳಿ ಅಥವಾ ಮಾನ್ಯ ವಿಶೇಷ ನ್ಯಾಯಾಧೀಶರು, ಅರ್ಜಿದಾರನ ವೈದ್ಯಕೀಯ ಪರೀಕ್ಷೆಯ ಸಂಬಂಧದಲ್ಲಿ ಯಾವುದಾದರೂ ಶಾಸನಬದ್ಧ ಅಗತ್ಯತೆಗಳನ್ನು ಪೂರೈಸಬೇಕಾಗಿದೆಯೇ ಎಂಬುದನ್ನು ದೃಢಪಡಿಸುವುದರ ಬಗ್ಗೆ ಅವರು ನ್ಯಾಯಿಕ ವಿವೇಚನೆಯನ್ನು ಅನ್ವಯಿಸಿಲ್ಲ ಎಂಬುದನ್ನು ಗಮನಿಸುವುದು ಯುಕ್ತವಾಗಿದೆ.

16. ಪೋಕ್ಸೊ ಅಧಿನಿಯಮ, 2012 ರ 34 ನೇ ಪ್ರಕರಣವು ಅರ್ಜಿದಾರನು ಬಾಲಾಪರಾಧಿಯೇ ಅಥವಾ ವಯಸ್ಕ ವ್ಯಕ್ತಿಯೇ ಎಂಬ ಬಗ್ಗೆ ವ್ಯಕ್ತಿಯ ವಯಸ್ಸನ್ನು ನಿರ್ಧರಿಸಲು ವಿಶೇಷ ನ್ಯಾಯಾಧೀಶರು ಅಧಿಕಾರ ನೀಡಿರುವ ಪ್ರಧಾನ ವ್ಯವಸ್ಥೆಯಾಗಿದ್ದು, ಆ ನಿರ್ದಿಷ್ಟ ವ್ಯಕ್ತಿಯನ್ನು ಬಾಲಕ ನ್ಯಾಯ ಮಂಡಳಿ ಮುಂದೆ ಅಥವಾ ವಿಶೇಷ ನ್ಯಾಯಾಲಯದ ಮುಂದೆ ಅಧಿವಿಚಾರಣೆ ಮಾಡಬೇಕಾಗುತ್ತದೆ. ಸದರಿ ಉಪಬಂಧವನ್ನು ಹೀಗೆ ಓದಲಾಗಿದೆ:–

*"34ನೇ ಪ್ರಕರಣ* – ***ಮಗುವು ಅಪರಾಧವನ್ನು ಮಾಡಿದ ಪ್ರಕರಣದಲ್ಲಿ ಕಾರ್ಯವಿಧಾನ ಮತ್ತು ವಿಶೇಷ ನ್ಯಾಯಾಲಯದಿಂದ ವಯಸ್ಸಿನ ನಿರ್ಧರಣೆ.–***

*(1) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಮಗುವು ಮಾಡಿದ್ದರೆ ಆ ಮಗುವಿನ ಬಗ್ಗೆ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2000 (2000ರ 56) ಉಪಬಂಧಗಳ ಮೇರೆಗೆ ವ್ಯವಹರಿಸತಕ್ಕದ್ದು.*

*(2) ವಿಶೇಷ ನ್ಯಾಯಾಲಯದ ಮುಂದೆ ನಡೆಯುವ ಯಾವುದೇ ವ್ಯವಹರಣೆಯಲ್ಲಿ ವ್ಯಕ್ತಿಯು ಮಗುವೇ ಅಥವಾ ಅಲ್ಲವೆ ಎಂಬ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ವಿಶೇಷ ನ್ಯಾಯಾಲಯವು ಆ ವ್ಯಕ್ತಿಯ ವಯಸ್ಸಿನ ಬಗ್ಗೆ ಸ್ವತಃ ಮನವರಿಕೆ ಮಾಡಿಕೊಂಡ ನಂತರ, ಆ ಪ್ರಶ್ನೆಯನ್ನು ತೀರ್ಮಾನಿಸತಕ್ಕದ್ದು ಮತ್ತು ಆ ತೀರ್ಮಾನಕ್ಕೆ ಬರಲು ಅದು ನೀಡಿರುವ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು.*

*(3) ವಿಶೇಷ ನ್ಯಾಯಾಲಯವು ನೀಡಿದ ಯಾವುದೇ ಆದೇಶವನ್ನು, ಆ ನ್ಯಾಯಾಲಯವು (2)ನೇ ಉಪ-ಪ್ರಕರಣದ ಮೇರೆಗೆ ಯಾವ ವ್ಯಕ್ತಿಯ ವಯಸ್ಸನ್ನು ನಿರ್ಧರಿಸಿದೆಯೋ ಆ ವ್ಯಕ್ತಿಯ ವಯಸ್ಸು, ಆ ವ್ಯಕ್ತಿಯ ಸರಿಯಾದ ವಯಸ್ಸಲ್ಲವೆಂದು ತರುವಾಯ ಯಾವುದೇ ರುಜುವಾತನ್ನು ಒದಗಿಸಿದ ಮಾತ್ರಕ್ಕೆ ಅನೂರ್ಜಿತವಾದುದೆಂದು ಭಾವಿಸತಕ್ಕದ್ದಲ್ಲ.*

16.1 ವ್ಯಕ್ತಿಯು ಮಗುವೇ ಅಥವಾ ಇಲ್ಲವೇ ಎಂಬ ಬಗ್ಗೆ ವಿಶೇಷ ನ್ಯಾಯಾಲಯದ ಮುಂದೆ ವ್ಯವಹರಣೆ ನಡೆಯಬೇಕಾದ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಅಂಥ ವ್ಯಕ್ತಿಯ ಬಗ್ಗೆ ಅದಕ್ಕೆ ಮನವರಿಕೆಯಾದ ತರುವಾಯ ವಿಶೇಷ ನ್ಯಾಯಾಲಯವು

ಅಂಥ ಪ್ರಶ್ನೆಯನ್ನು ನಿರ್ಧರಿಸತಕ್ಕದ್ದು ಎಂಬುದನ್ನು ಸದರಿ ಉಪಬಂಧದ (2)ನೇ ಉಪ–ಖಂಡವು ಸ್ಪಷ್ಟವಾಗಿ ಸೂಚಿಸುತ್ತದೆ. ಈ ಉಪಬಂಧದಲ್ಲಿ, "ಅದಕ್ಕೆ ಮನವರಿಕೆಯಾಗುವುದು" ಎಂಬ ಪದಗಳಿಗೆ ಒತ್ತನ್ನು ನೀಡಬೇಕಾಗುತ್ತದೆ ಮತ್ತು ನ್ಯಾಯಾಲಯದ ಮುಂದೆ ಮತ್ತು ತತ್ಕಾಲದಲ್ಲಿರುವ ಕಾನೂನಿನ ಮೇರೆಗೆ ಸಂಬಂಧಪಟ್ಟ ಕಾನೂನಿನ ಮುಂದೆ ಇಡಲಾದ ಮೌಖಿಕ ಮತ್ತು ದಸ್ತಾವೇಜೀಯ– ದಸ್ತಾವೇಜೀಯ ಸಾಕ್ಷ್ಯಗಳಂಥ ಇತರ ಸುತ್ತಮುತ್ತಲಿನ ಸನ್ನಿವೇಶಗಳನ್ನು ನ್ಯಾಯಾಲಯವು ಹೇಗೆ ಮನವರಿಕೆಯನ್ನು ಮಾಡಿಕೊಳ್ಳಬಲ್ಲದು ಎಂಬುದನ್ನು ಪರೀಕ್ಷಿಸಬೇಕಾಗುತ್ತದೆ.

17. ಮತ್ತೊಂದು ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ಪ್ರಮುಖ ಅಂಶವೇನೆಂದರೆ, ಸರ್ಕಾರವು ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ನಿಯಮಗಳು, 2007ನ್ನು (ಸಂಕ್ಷಿಪ್ತತೆಗಾಗಿ, 'ಜೆಜೆ (ಸಿಪಿಸಿ) ನಿಯಮಗಳು, 2007) ರೂಪಿಸಿರುವುದು. ಸದರಿ ನಿಯಮವು, ಕಾನೂನಿನ ಸಂಘರ್ಷಣೆಯಲ್ಲಿರುವ ಮಕ್ಕಳ ಅಥವಾ ಬಾಲಾಪರಾಧಿಯ ವಯಸ್ಸನ್ನು ಹೇಗೆ ನಿರ್ಧರಿಸಬೇಕಾಗುತ್ತದೆ ಎಂಬುದರ ಬಗೆಗಿನ ನಿರ್ದಿಷ್ಟ ವಿಶೇಷ ಪ್ರಕ್ರಿಯೆಯನ್ನು ಉಪಬಂಧಿಸುತ್ತದೆ. 34ನೇ ಪ್ರಕರಣವು, ವಯಸ್ಸನ್ನು ನಿರ್ಧರಿಸುವ ನ್ಯಾಯಾಲಯದ ಪ್ರಧಾನ ಹಕ್ಕನ್ನು ನೀಡಿದ್ದು, ಇದರಿಂದ, ಜೆಜೆ (ಸಿಪಿಸಿ) ನಿಯಮಗಳು, 2007ರ 12ನೇ ನಿಯಮವು, ವಿವಾದಿತ ವ್ಯಕ್ತಿಯ ವಯಸ್ಸನ್ನು ನ್ಯಾಯಾಲಯವು ಯಾವ ರೀತಿಯಲ್ಲಿ ಪರಿಗಣಿಸಬೇಕಾಗುತ್ತದೆ ಎಂಬುದನ್ನು ಅನುಸರಿಸಬೇಕಾದ ಪ್ರಕ್ರಿಯೆಯನ್ನು ಉಪಬಂಧಿಸುತ್ತದೆ. ಸದರಿ ನಿಯಮಗಳು 2007, 12ನೇ ನಿಯಮವನ್ನು ಈ ಮುಂದಿನಂತೆ ಓದಲಾಗಿದೆ:–

> *"12. **ವಯಸ್ಸನ್ನು ನಿರ್ಧರಿಸುವಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ**– (1) ಕಾನೂನಿನ ಸಂಘರ್ಷದಲ್ಲಿರುವ ಮಗು ಅಥವಾ ಬಾಲಕನಿಗೆ ಸಂಬಂಧಿಸಿದ ಪ್ರತಿಯೊಂದು ಪ್ರಕರಣದಲ್ಲಿ, ನ್ಯಾಯಾಲಯ ಅಥವಾ ಮಂಡಳಿ ಅಥವಾ ಸಂದರ್ಭಾನುಸಾರ ಈ ನಿಯಮಗಳ 19ನೇ ನಿಯಮದಲ್ಲಿ ಉಲ್ಲೇಖಿಸಲಾದ ಸಮಿತಿಯು, ಆ ಉದ್ದೇಶಕ್ಕಾಗಿ ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಮೂವತ್ತು ದಿನಗಳ*

*ಅವಧಿಯೊಳಗೆ ಕಾನೂನಿನ ಸಂಘರ್ಷದಲ್ಲಿರುವ ಅಂಥ ಬಾಲಕ ಅಥವಾ ಮಗುವಿನ ವಯಸ್ಸನ್ನು ನಿರ್ಧರಿಸತಕ್ಕದ್ದು.*

*(2) ನ್ಯಾಯಾಲಯ ಅಥವಾ ಮಂಡಳಿ ಅಥವಾ ಸಂದರ್ಭಾನುಸಾರ ಸಮಿತಿಯು, ಬಾಲಕತ್ವವನ್ನು ಅಥವಾ ಅನ್ಯಥಾ ಬಾಲಕ ಅಥವಾ ಮಗು ಅಥವಾ ಕಾನೂನಿನ ಸಂಘರ್ಷದಲ್ಲಿರುವ ಬಾಲಕನ ಮೇಲ್ನೋಟಕ್ಕೆ ಕಂಡುಬರುವ ದೈಹಿಕ ಚರ್ಯೆಯ ಆಧಾರದ ಮೇಲೆ ಅಥವಾ ಲಭ್ಯವಿದ್ದರೆ ದಸ್ತಾವೇಜುಗಳ ಆಧಾರದ ಮೇಲೆ ನಿರ್ಧರಿಸತಕ್ಕದ್ದು ಮತ್ತು ಅವನನ್ನು ಪರಿವೀಕ್ಷಣಾಲಯ ಅಥವಾ ಕಾರಾಗೃಹಕ್ಕೆ ಕಳುಹಿಸತಕ್ಕದ್ದು.*

*(3) ಕಾನೂನಿನೊಂದಿಗೆ ಘರ್ಷಣೆಯಲ್ಲಿರುವ ಒಂದು ಮಗುವಿನ ಅಥವಾ ಬಾಲಕನ ವಯಸ್ಸಿನ ನಿರ್ಧರಣೆಗೆ ಸಂಬಂಧಿಸಿದ ಪ್ರತಿ ಮೊಕದ್ದಮೆಯಲ್ಲೂ ತನಿಖೆಯನ್ನು, ನ್ಯಾಯಾಲಯದಿಂದ ಅಥವಾ ಮಂಡಳಿಯಿಂದ ಅಥವಾ ಸಂದರ್ಭಾನುಸಾರ, ಸಮಿತಿಯು ಈ ಮುಂದಿನ ಸಾಕ್ಷ್ಯವನ್ನು ಪಡೆದುಕೊಳ್ಳುವ ಮೂಲಕ,–*

*ಎ(i) ಲಭ್ಯವಿದ್ದಲ್ಲಿ ಮೆಟ್ರಿಕ್ಯೂಲೇಷನ್ ಅಥವಾ ತತ್ಸಮಾನ ಪ್ರಮಾಣಪತ್ರಗಳು, ಅವುಗಳ ಗೈರು ಹಾಜರಿಯಲ್ಲಿ;*

*(ii) ಮೊದಲು ಸೇರಿದ ಶಾಲೆಯಿಂದ (ಪ್ಲೇ ಸ್ಕೂಲ್‌ನ್ನು ಹೊರತುಪಡಿಸಿ) ಪಡೆದ ಜನ್ಮ ದಿನಾಂಕದ ಪ್ರಮಾಣಪತ್ರ; ಅದು ಲಭ್ಯವಿಲ್ಲದಿದ್ದಲ್ಲಿ,*

*(iii) ನಗರ ಸಭೆ ಅಥವಾ ಮುನ್ಸಿಪಾಲಿಟಿ ಪ್ರಾಧಿಕಾರ ಅಥವಾ ಪಂಚಾಯತ್ ನಿಂದ ನೀಡಲಾದ ಜನನ ಪ್ರಮಾಣಪತ್ರ;*

***ಬಿ. ಮತ್ತು ಮೇಲಿನ (ಎ) ಖಂಡದ (i) (ii) (iii) ಅವು ಯಾವುವೂ ಲಭ್ಯವಿಲ್ಲದಿದ್ದಲ್ಲಿ, ಯುಕ್ತವಾಗಿ ರಚಿಸಲಾದ ವೈದ್ಯಕೀಯ ಮಂಡಳಿಯಿಂದ ಬಾಲಕನ ಅಥವಾ ಮಗುವಿನ ವಯಸ್ಸಿನ ನಿರ್ಧರಣೆಯ ಘೋಷಣೆಯನ್ನು ವೈದ್ಯಕೀಯ ಅಭಿಪ್ರಾಯದ ಮೂಲಕ ಕೋರಬಹುದಾಗಿದೆ.*** *ವಯಸ್ಸಿನ ಸರಿಯಾದ ನಿರ್ಧರಣೆಯನ್ನು ಮಾಡದಿದ್ದ ಪಕ್ಷದಲ್ಲಿ, ನ್ಯಾಯಾಲಯ ಅಥವಾ ಮಂಡಳಿ ಅಥವಾ ಸಂದರ್ಭಾನುಸಾರ ಸಮಿತಿಯು ತಮ್ಮಿಂದ ದಾಖಲಿಸಬಹುದಾದ ಕಾರಣಗಳಿಗಾಗಿ ಅಗತ್ಯವೆಂದು ಪರಿಗಣಿಸಿದಲ್ಲಿ, ಅವನ / ಅವಳ ವಯಸ್ಸನ್ನು ಪರಿಗಣಿಸುವುದಕ್ಕಾಗಿ, ಒಂದು ವರ್ಷದ ಅಂಚಿನ ಕಡಿಮೆ ಅವಧಿಯನ್ನು ಮಗು ಅಥವಾ ಬಾಲಕನಿಗೆ ನೀಡಬಹುದಾಗಿದೆ ಮತ್ತು ಅಂತಹ ಮೊಕದ್ದಮೆಯುಲ್ಲಿ ಆದೇಶವನ್ನು ಹೊರಡಿಸುವಾಗ, ಲಭ್ಯವಿರಬಹುದಾದ ಅಂತಹ ಸಾಕ್ಷ್ಯವನ್ನು ಅಥವಾ ವೈದ್ಯಕೀಯ ಅಭಿಪ್ರಾಯವನ್ನು, ಸಂದರ್ಭಾನುಸಾರ ಅವನ ವಯಸ್ಸಿನ ಸಂಬಂಧದಲ್ಲಿ ನಿರ್ಧರಣೆಯನ್ನು ದಾಖಲಿಸಿರುವುದನ್ನು ಮತ್ತು ಮೇಲಿನ (ಎ) ಖಂಡದ (i) (ii) (iii) ಖಂಡಗಳಲ್ಲಿ ನಿರ್ದಿಷ್ಟ ಪಡಿಸಿದ ಯಾವುದೇ ಸಾಕ್ಷ್ಯವನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು, ಅಥವಾ ಅವು ಯಾವುವೂ ಲಭ್ಯವಿಲ್ಲದಿದ್ದಲ್ಲಿ, ಕಾನೂನಿನೊಂದಿಗೆ ಘರ್ಷಣೆಯಲ್ಲಿರುವ ಮಗುವಿನ ಅಥವಾ ಬಾಲಕನ ಅಂತಹ ವಯಸ್ಸಿನ ಸಂಬಂಧದಲ್ಲಿ ಖಂಡ (ಬಿ) ನಿರ್ಣಾಯಕ ರುಜುವಾತಾಗಿರತಕ್ಕದ್ದು.*

*(4) ಬಾಲಕ ಅಥವಾ ಮಗು ಅಥವಾ ಕಾನೂನಿನ ಸಂಘರ್ಷದಲ್ಲಿರುವ ಬಾಲಕನ ವಯಸ್ಸು ಅಪರಾಧ ನಡೆದ ದಿನಾಂಕದಂದು, ನಿರ್ದಿಷ್ಟಪಡಿಸಲಾದ ಯಾವುದೇ ನಿರ್ಣಾಯಕ ರುಜುವಾತಿನ ಆಧಾರದ ಮೇಲೆ 18 ವರ್ಷಗಳಿಗಿಂತ ಕಡಿಮೆಯಿದೆಯೆಂದು ಕಂಡು ಬಂದರೆ, ವಯಸ್ಸನ್ನು ತೋರಿಸುವ ಮತ್ತು ಬಾಲಕತ್ವದ ವಿವರಣೆಯನ್ನು ಘೋಷಿಸಿ ಆದೇಶವನ್ನು ಲಿಖಿತದಲ್ಲಿ ಹೊರಡಿಸತಕ್ಕದ್ದು ಇಲ್ಲದಿದ್ದರೆ, ಅಧಿನಿಯಮ ಮತ್ತು*

*ನಿಯಮಗಳ ಉದ್ದೇಶಕ್ಕಾಗಿ ಆದೇಶದ ಪ್ರತಿಯನ್ನು ಅಂಥ ಬಾಲಕ ಅಥವಾ ಸಂಬಂಧಪಟ್ಟ ವ್ಯಕ್ತಿಗೆ ನೀಡತಕ್ಕದ್ದು.*

*(5) ಹೆಚ್ಚಿನ ವಿಚಾರಣೆ ಅಥವಾ ಅನ್ಯಥಾ ಅಗತ್ಯಪಡಿಸಿದಲ್ಲಿ ಅದನ್ನು ಉಳಿದು ಮತ್ತು ಹೊರತುಪಡಿಸಿ ಅದರ ಜೊತೆಗೆ ಅಧಿನಿಯಮದ 7–ಎ ಪ್ರಕರಣ, 64ನೇ ಪ್ರಕರಣ ಮತ್ತು ಈ ನಿಯಮಗಳ ನಿಬಂಧನೆಗಳಲ್ಲಿ ಇರುವ ಮತ್ತು ಪ್ರಮಾಣಪತ್ರಗಳನ್ನು ಹೊರತುಪಡಿಸಿರುವ ಸಂದರ್ಭಗಳಲ್ಲಿ, ಈ ನಿಯಮದ (3)ನೇ ಉಪ–ನಿಯಮದಲ್ಲಿ ಉಲ್ಲೇಖಿಸಲಾದ ಅಥವಾ ಯಾವುದೇ ಇತರ ದಸ್ತಾವೇಜಿಯ ರುಜುವಾತನ್ನು ಪರಿಶೀಲಿಸಿ ಪಡೆದುಕೊಂಡ ನಂತರ ನ್ಯಾಯಾಲಯ ಅಥವಾ ಮಂಡಳಿ ಹೆಚ್ಚಿನ ವಿಚಾರಣೆಯನ್ನು ನಡೆಸತಕ್ಕದ್ದಲ್ಲ.*

*(6) (3)ನೇ ಉಪ–ನಿಯಮ ಮತ್ತು ಅಧಿನಿಯಮದಲ್ಲಿರುವ ಉಪಬಂಧಗಳಿಗನುಸಾರವಾಗಿ ಬಾಲಕತ್ವದ ವಿವರಣೆಯು ವಸ್ತುಸ್ಥಿತಿಯನ್ನು ನಿರ್ಧರಿಸಲಾಗದಿದ್ದಲ್ಲಿ, ಕಾನೂನಿನ ಸಂಘರ್ಷಣೆಯಲ್ಲಿರುವ ಬಾಲಕನ ಹಿತಾಸಕ್ತಿಯಂತೆ ಯುಕ್ತ ಆದೇಶವನ್ನು ಹೊರಡಿಸುವುದಕ್ಕಾಗಿ ಅಧಿನಿಯಮದ ಮೇರೆಗಿನ ಶಿಕ್ಷೆಯ ವಿನಾಯಿತಿಯನ್ನು ಅಗತ್ಯಪಡಿಸಿ, ವಿಲೇವಾರಿ ಮಾಡಿದ ಆ ಪ್ರಕರಣಗಳಿಗೂ ಸಹ ಅನ್ವಯಿಸತಕ್ಕದ್ದು".*

18. ಮೇಲಿನ ಪ್ರಕ್ರಿಯೆಯ ಬೆಳಕಿನಲ್ಲಿ ನ್ಯಾಯಾಲಯವು, ನ್ಯಾಯಾಲಯದ ಮುಂದಿರುವ ವ್ಯಕ್ತಿಯು, ಕಾನೂನಿನ ಸಂಘರ್ಷಣೆಯಲ್ಲಿರುವವರು ಬಾಲಪರಾಧಿಯೇ ಅಥವಾ ಇಲ್ಲವೇ ಎಂಬ ಅಂಶವನ್ನು ಪರಿಗಣಿಸಬೇಕು. ಶಾಲೆಯಿಂದ ಮೆಟ್ರಿಕ್ಯುಲೇಷನ್ ಅಥವಾ ತತ್ಸಮಾನ ಪ್ರಮಾಣಪತ್ರ ಮತ್ತು ಜನನ ದಿನಾಂಕ ಪ್ರಮಾಣ ಪತ್ರಗಳಂಥ ಮತ್ತು ಕಾರ್ಪೋರೇಷನ್ ಅಥವಾ ಮುನಿಸಿಪಲ್ ಪ್ರಾಧಿಕಾರವು ಹೊರಡಿಸಿದ ಜನನ ಪ್ರಮಾಣ ಪತ್ರದಂಥ ದಸ್ತಾವೇಜುಗಳು ಲಭ್ಯವಿದ್ದರೆ,

ನ್ಯಾಯಾಲಯವು ಯಾವ ನಿರ್ಣಯವನ್ನು ತೆಗೆದುಕೊಳ್ಳಬೇಕು ಎಂಬ ಬಗೆಗಿನ ಕೆಲವು ತತ್ವಗಳನ್ನು ನ್ಯಾಯಾಲಯಕ್ಕೆ ಮಾರ್ಗದರ್ಶನ ಮಾಡುವುದನ್ನು ಈ ಉಪಬಂಧವೇ ಸ್ಪಷ್ಟವಾಗಿ ಪ್ರಕಟಿಸುತ್ತದೆ. ಈ ಸಾಕ್ಷ್ಯಗಳು ನ್ಯಾಯಾಲಯದ ಮುಂದೆ ಲಭ್ಯವಾಗಿದ್ದರೆ, ನ್ಯಾಯಾಲಯವು, ವೈದ್ಯಕೀಯ ಅಭಿಪ್ರಾಯವನ್ನು ನೋಡುವ ಅಭ್ಯಂತರವಿರುವುದಿಲ್ಲ ಅಥವಾ ನ್ಯಾಯಾಲಯದ ಮುಂದೆ ರುಜುವಾತುಪಡಿಸಬೇಕೆಂದು ಕೋರಲಾದ ವಯಸ್ಸಿಗೆ ಸಂಬಂಧಪಟ್ಟ ವೈದ್ಯಕೀಯ ಅಭಿಪ್ರಾಯವನ್ನು ಪೊಲೀಸರು ಸಹ ಪಡೆದುಕೊಳ್ಳುವ ಅಗತ್ಯವಿರುವುದಿಲ್ಲ. ನಿಯಮಗಳು, 2007 ರ 12(3) ನಿಯಮದಲ್ಲಿ ಸೂಚಿಸಲಾದಂಥ ದಸ್ತಾವೇಜುಗಳು ಇಲ್ಲದಿರುವಾಗ ಮಾತ್ರ, ನ್ಯಾಯಾಲಯವು, ಬಾಲಾಪರಾಧಿಯ ಅಥವಾ ಮಕ್ಕಳ ವಯಸ್ಸನ್ನು ನಿರ್ಧರಿಸುವ ಯುಕ್ತವಾಗಿ ರಚಿಸಲಾದ ವೈದ್ಯಕೀಯ ಮಂಡಳಿಗೆ ವ್ಯಕ್ತಿಯನ್ನು ಕಳುಹಿಸುವ ಗತ್ಯಂತರವಿರುತ್ತದೆ. ಸರಿಯಾದ ವಯಸ್ಸಿನ ನಿರ್ಧರಣೆಯನ್ನು ಮಾಡಿರದಿದ್ದ ಪಕ್ಷದಲ್ಲಿ, ನ್ಯಾಯಾಲಯ ಅಥವಾ ಮಂಡಳಿಯು, ತಾನು ದಾಖಲಿಸಬೇಕಾದ ಕಾರಣಗಳಿಗಾಗಿ, ಸಂದರ್ಭಾನುಸಾರ ಒಂದು ವರ್ಷದ ಅಂಚಿನ ಒಂದು ಭಾಗದಲ್ಲಿ ಅವನ ವಯಸ್ಸನ್ನು ಪರಿಗಣಿಸುವ ಮೂಲಕ ಮಗುವಿಗೆ ಅಥವಾ ಬಾಲಾಪರಾಧಿಗೆ ಅನುಕೂಲ ಮಾಡುವ ಅಗತ್ಯವನ್ನು ಪರಿಗಣಿಸುವುದಾದರೆ, ನ್ಯಾಯಾಲಯವು, ಲಭ್ಯವಿರಬಹುದಾದಂಥ ಸಾಕ್ಷ್ಯವನ್ನು ಅಥವಾ ವೈದ್ಯಕೀಯ ಅಭಿಪ್ರಾಯವನ್ನು ಪರಿಗಣನೆಗೆ ತೆಗೆದುಕೊಂಡ ನಂತರವಷ್ಟೇ ಅಂಥ ಪ್ರಕರಣಗಳಿಗೆ ಆದೇಶವನ್ನು ಹೊರಡಿಸುವಾಗ ವ್ಯಕ್ತಿಯ ವಯಸ್ಸಿಗೆ ಸಂಬಂಧಪಟ್ಟಂತೆ ನಿರ್ಣಯವನ್ನು ದಾಖಲಿಸುವ ಮೂಲಕ ಸಂದರ್ಭಾನುಸಾರ ನ್ಯಾಯಾಲಯವೂ ಸಹ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು ಮತ್ತು ಆಗ ಮಾತ್ರ ಪ್ರಕರಣವನ್ನು ಮುಂದುವರಿಸಬೇಕು. ಆಪಾದಿತ ಅಪರಾಧ ನಡೆದ ದಿನಾಂಕದಂದು ಇದ್ದಂತೆ ಸಂತ್ರಸ್ತರ ವಯಸ್ಸು 18 ವರ್ಷಗಳಿಗಿಂತ ಹೆಚ್ಚಾಗಿದ್ದರೆ, ವಿಶೇಷ ನ್ಯಾಯಾಲಯವು, ಅಪರಾಧಿಯನ್ನು ಅಧಿವಿಚಾರಿಸಲು ಮೊಕದ್ದಮೆಯನ್ನು ಮುಂದುವರಿಸಬಹುದು ಮತ್ತು ಅವನು 18 ವರ್ಷಗಳಿಗಿಂತ ಕಡಿಮೆ ವಯಸ್ಸಿನವನಾಗಿದ್ದರೆ, ನ್ಯಾಯಾಲಯವು, ಬಾಲಾಪರಾಧಿಯನ್ನು ಸಕ್ಷಮ ಪ್ರಾಧಿಕಾರದ ಮುಂದೆ ಎಂದರೆ ಬಾಲಕ ನ್ಯಾಯ ಮಂಡಳಿಗೆ ಕಳುಹಿಸುವ ಆದೇಶವನ್ನು ಹೊರಡಿಸತಕ್ಕದ್ದು.

19. ಮೇಲಿನ ಉಪಬಂಧಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ವೈದ್ಯಕೀಯ ಮಂಡಳಿಯ ಅಭಿಪ್ರಾಯವನ್ನು ಯಾವ ಸಂದರ್ಭಗಳ ಅಡಿಯಲ್ಲಿ ನ್ಯಾಯಾಲಯವು ಪಡೆದುಕೊಳ್ಳಬಹುದು ಎಂಬುದು ಸಾಕಷ್ಟು ಸ್ಪಷ್ಟವಾಗುತ್ತದೆ. ಈ ಸಂಬಂಧದಲ್ಲಿ, ಈ ಪ್ರಕರಣದ ವಾಸ್ತವಿಕ ಅಂಶಗಳನ್ನು ಕಳುಹಿಸುವ ಮೊದಲು, ನ್ಯಾಯಾಲಯದ ಕರ್ತವ್ಯಗಳಿಗೆ ಸಂಬಂಧಪಟ್ಟಂತೆ ಸರ್ವೋಚ್ಚ ನ್ಯಾಯಾಲಯದ ಕೆಲವು ನಿರ್ಣಯಗಳನ್ನು ಮನಸ್ಸಿನಲ್ಲಿಟ್ಟು ಕೊಳ್ಳುವುದು ನ್ಯಾಯಸಮ್ಮತ ಮತ್ತು ಅಗತ್ಯವಾದುದಾಗಿದೆ. ***ಷಾ ನವಾಜ್ –ವಿರುದ್ಧ– ಉತ್ತರ ಪ್ರದೇಶ ರಾಜ್ಯ ಮತ್ತು ಮತ್ತೊಬ್ಬರು***[1] ಪ್ರಕರಣದಲ್ಲಿನ **ಶಿರೋನಾಮೆ ಟಿಪ್ಪಣಿಗಳಲ್ಲಿ– 'ಎ, ಬಿ ಮತ್ತು ಸಿ'**ಗಳಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:–

> *ಎ. ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ನಿಯಮಗಳು, 2007, ನಿಯಮ 12 ಅಂಕಪಟ್ಟಿಯ ವಯಸ್ಸಿನ ನಂಬಿಕಾರ್ಹತೆಯನ್ನು ಮತ್ತು ಆಪಾದಿತನ ವಯಸ್ಸನ್ನು ನಿರ್ಧರಿಸುವ ಸಂಬಂಧ ಶಾಲೆ ಬಿಟ್ಟ ಪ್ರಮಾಣ ಪತ್ರವನ್ನು ನಿರ್ವಹಿಸುವಲ್ಲಿ ಅನುಸರಿಸಬೇಕಾದ ಬಾಲಾಪರಾಧ್ತೆಂಯ ಪ್ರಕ್ರಿಂಯೆ ಅಭಿಪ್ರಾಯಪಟ್ಟಿದೆ,– ಅಂಕಪಟ್ಟಿಯಲ್ಲಿ ನಮೂದಿಸಿದ ಹುಟ್ಟಿದ ದಿನಾಂಕಕ್ಕೆ ಸಂಬಂಧಪಟ್ಟ ನಮೂದು ಹಾಗು ಶಾಲೆ ಪ್ರಮಾಣ ಪತ್ರ ಆಪಾದಿತ ವ್ಯಕ್ತಿಯು ವಯಸ್ಸನ್ನು ನಿರ್ಧರಿಸುವುದಕ್ಕೆ ಸಿಂಧುವಾಗಿರತ್ತವೆ – ನಿಯಮ–12, ಮೆಟ್ರಿಕ್ಯುಲೇಷನ್ ಪ್ರಮಾಣಪತ್ರ ಅಥವಾ ಶಾಲಾ ಪ್ರಮಾಣಪತ್ರ ಅಥವಾ ಕಾರ್ಪೋರೇಷನ್ ಅಥವಾ ಯಾವುದೇ ಪಂಚಾಯತ್ ಅಥವಾ ಮುನ್ಸಿಪಾಲಿಟಿಯು ನೀಡಿದ ಯಾವುದೇ ಜನನ ಪ್ರಮಾಣಪತ್ರ ಲಭ್ಯವಿಲ್ಲದಿದ್ದಾಗ ಮಾತ್ರ ವೈದ್ಯಕೀಯ ಮಂಡಳಿಯಿಂದ ಪಡೆದ ವೈದ್ಯಕೀಯ ಪ್ರಮಾಣಪತ್ರವನ್ನು ಕೋರಬೇಕಾಗುತ್ತದೆಯೆಂಬುದನ್ನು ಪ್ರಧಾನವಾಗಿ ಒತ್ತಿಹೇಳುತ್ತದೆ, ಅಡಿಷನಲ್ ಸೆಷನ್ಸ್ ನ್ಯಾಯಾಧೀಶರು ಮತ್ತು ಉಚ್ಚ ನ್ಯಾಯಾಲಯವು ವಿರುದ್ಧ ದೃಷ್ಟಿಕೋನವನ್ನು ತೆಗೆದುಕೊಳ್ಳುವ ಮೂಲಕ ತಪ್ಪೆಸಗಿದಲ್ಲಿ,*

1. 2011 (13) ಎಸ್‌ಸಿಸಿ 751

*ಅಲ್ಲದೆ, ಅಂಕಪಟ್ಟಿ ಮತ್ತು ಶಾಲೆ ಬಿಡುವ ಪ್ರಮಾಣ ಪತ್ರವು ಒಂದಕ್ಕೊಂದು ಪುಷ್ಟಿ ನೀಡುವಂತಿದ್ದರೆ, ಮತ್ತು ಶಾಲಾ ಪ್ರಾಂಶುಪಾಲರು ಮತ್ತು ಗುಮಾಸ್ತ ಮತ್ತು ಆಪಾದಿತನ ತಾಯಿಯ ಸಾಕ್ಷ್ಯ ಮತ್ತಷ್ಟು ಪುಷ್ಟಿ ನೀಡಿದರೆ, ಅದೇ ಅಪೀಲುದಾರನು ಸಂಭವಿಸಿದ ದಿನಾಂಕದಂದು ಬಾಲಪರಾಧಿಯೆಂದು ಘೋಷಿಸಲಾಗುವುದು – ಸಾಕ್ಷ್ಯ ಅಧಿನಿಯಮ, 1872 ದ 35ನೇ ಪ್ರಕರಣ – ಬಾಲಕ ನ್ಯಾಯ (ಮಕ್ಕಳಪಾಲನೆ ಮತ್ತು ಸಂರಕ್ಷಣೆ) ನಿಯಮ, 2000 ದ 14 ಮತ್ತು 15ನೇ ಪ್ರಕರಣಗಳು 302 ಮತ್ತು 307ನೇ ಪ್ರಕರಣಗಳಲ್ಲಿ – ಬಾಲಾಪರಾಧತೆಯ ಪ್ರಯೋಜನವನ್ನು ನೀಡಲಾಗಿದೆ.*

*ಬಿ. ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ನಿಯಮಗಳು, 2007 – 12ನೇ ನಿಯಮ, ಆಪಾದಿತನ ವಯಸ್ಸನ್ನು ನಿರ್ಧರಿಸುವುದಕ್ಕೆ ಅಂಗೀಕಾರಾರ್ಹವಾದ ಅಂಕಪಟ್ಟಿ ಶಾಲೆ ಬಿಟ್ಟ ಪ್ರಮಾಣಪತ್ರವನ್ನು ವಯಸ್ಸನ್ನು ನಿರ್ಧರಿಸುವಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ ಬಾಲಾಪರಾಧತೆಯ ಅಂಚಿನ ಪ್ರಕರಣಗಳು, ಅತೀ ತಾಂತ್ರಿಕ ಪ್ರಸ್ತಾವವನ್ನು ಅಳವಡಿಸಿಕೊಂಡಿಲ್ಲ – ಸದರಿ ಸಾಕ್ಷ್ಯದಲ್ಲಿ ಎರಡು ದೃಷ್ಟಿಕೋನಗಳು ಸಾಧ್ಯವಾಗಿದ್ದರೆ, ನ್ಯಾಯಾಲಯವು ತುದಿಯ ಪ್ರಕರಣಗಳಲ್ಲಿ ಬಾಲಪರಾಧಿಯು ಅನುಸರಿಸಬೇಕಾದ ಆಪಾದಿತನ ಧಾರಣೆಯ ಪರವಾಗಿ ಎರವಲನ್ನು ತೆಗೆದುಕೊಳ್ಳಬೇಕು – ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ಅಧಿನಿಯಮ, 2000, 14 ಮತ್ತು 15 ನೇ ಪ್ರಕರಣಗಳು – ಸಾಕ್ಷ್ಯ ಅಧಿನಿಯಮ, 1872, ಪ್ರಕರಣ 35.*

*ಸಿ. ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ನಿಯಮಗಳು, 2007 – ನಿಯಮ 12 – ಬಾಲಕ– ವಯುಸ್ಸು ನಿರ್ಧರಣೆಯಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ – ಅಂಕಪಟ್ಟಿ –*

> *ಶಾಲೆ ಬಿಡುವ ಪ್ರಮಾಣ ಪತ್ರ – ಸಾಕ್ಷ್ಯದ ಮೌಲ್ಯಮಾಪನ – ವೈದ್ಯಕೀಯ ವರದಿ ಮೇಲೆ ಶಾಲಾ ಪ್ರಮಾಣ ಪತ್ರಕ್ಕೆ ಆದ್ಯತೆಯನ್ನು ನೀಡಲಾಗಿದೆ – ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ಅಧಿನಿಯಮ, 2000, ಪ್ರಕರಣ 14 ಮತ್ತು 15 – ಸಾಕ್ಷ್ಯ ಅಧಿನಿಯಮ, 1872, ಪ್ರಕರಣ 35."*

20. ಮಾನ್ಯ ಸರ್ವೋಚ್ಚ ನ್ಯಾಯಾಲಯವು 11 ರಿಂದ 27 ರವರೆಗಿನ ಕಂಡಿಕೆಗಳಲ್ಲಿ ವಿವರವಾಗಿ, ನ್ಯಾಯಾಲಯಗಳು ಅನುಸರಿಸಬೇಕಾದ ಪ್ರಕ್ರಿಯೆಗಳನ್ನು ವಿವರಿಸುವ ಮೇಲಿನ ಸದರಿ ವಿಷಯಗಳಿಗೆ ಸಂಬಂಧಿಸಿದ್ದು, ಸಾಕ್ಷ್ಯಗಳನ್ನು ಹೇಗೆ ಮೌಲ್ಯಮಾಪನ ಮಾಡಬೇಕು ಎಂಬುದನ್ನು ಮತ್ತು ಉಪಬಂಧದ ಅಡಿಯಲ್ಲಿ ಯಾವ ಪ್ರಯೋಜನ ಲಭ್ಯವಿದೆ ಎಂಬುದನ್ನು ಮತ್ತು ಇದನ್ನು ಹೇಗೆ ಆಪಾದಿತನಿಗೆ ಅಥವಾ ಇತರೆ ರೀತಿಯಲ್ಲಿ ಒದಗಿಸಬೇಕು ಎಂಬುದನ್ನು ಸಹ ತಿಳಿಸಿರುತ್ತದೆ.

21. ***ಕುಲಾಯ್ ಇಬ್ರಾಯಿಂ @ ಇಬ್ರಾಹಿಂ –ವಿರುದ್ಧ– ರಾಜ್ಯ, ಬಿ–1 ರಿಂದ ಪ್ರತಿನಿಧಿತ, ಬಜಾರ್ ಪೊಲೀಸ್ ಸ್ಟೇಷನ್, ಕೊಯಮತ್ತೂರು***[2], ವರದಿಯಾಗಿರುವ ಮತ್ತೊಂದು ನಿರ್ಣಯದಲ್ಲಿ, ಶಿರೋನಾಮೆ ಟಿಪ್ಪಣಿ–ಸಿ ಮತ್ತು ಡಿ ಗಳಲ್ಲಿ ಸರ್ವೋಚ್ಚ ನ್ಯಾಯಾಲಯವು, ಯಾವ ಸನ್ನಿವೇಶಗಳಲ್ಲಿ ವೈದ್ಯಕೀಯ ವರದಿಯನ್ನು ಕೋರಬಹುದು ಮತ್ತು ನ್ಯಾಯಾಲಯಗಳು ಮೌಲ್ಯಮಾಪನ ಮಾಡಬಹುದು ಎಂಬ ಬಗ್ಗೆ ನಿರ್ದಿಷ್ಟವಾಗಿ ಅಭಿಪ್ರಾಯಪಟ್ಟಿದ್ದು ಅವುಗಳನ್ನು ಈ ಮುಂದಿನಂತೆ (ಶಿರೋನಾಮೆ ಟಿಪ್ಪಣಿಗಳು–ಸಿ ಮತ್ತು ಡಿ) ಓದಲಾಗಿದೆ:–

> *ಸಿ. ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ನಿಯಮಗಳು, 2007 – ನಿಯಮ 12(3) ಬಾಲಾಪರಾಧತೆಯ ಕ್ಲೇಮು – ಬಾಲಕ ನ್ಯಾಯ ಮಂಡಳಿ ಅಥವಾ ಸಮಿತಿಯು ಆಪಾದಿತನ ವಯಸ್ಸಿನ ನಿರ್ಧರಣೆಗಾಗಿ ವೈದ್ಯಕೀಯ ವರದಿಯನ್ನು*

2. 2014 (12) ಎಸ್‌ಸಿಸಿ 332

*ಕೋರತಕ್ಕದ್ದು, ಬಾಲಾಪರಾಧ ನ್ಯಾಯ ನಿಯಮಗಳು, 2007 ರ 12(3)(ಎ)(i) ರಿಂದ (iii) ರ ವರೆಗಿನ ನಿಯಮಗಳಲ್ಲಿ ದಸ್ತಾವೇಜುಗಳನ್ನು ಸೂಚಿಸಲಾಗಿಲ್ಲ ಲಭ್ಯವಾಗದಿದ್ದಲ್ಲಿ ಅಥವಾ ಅವುಗಳು ಖೋಟಾ ಆಗಿವೆ ಅಥವಾ ಕೈವಾಡವಿದೆಯೆಂದು ಕಂಡುಬಂದಲ್ಲಿ, ಆಪಾದಿತನ ವಯಸ್ಸಿನ ನಿರ್ಧರಣೆಗಾಗಿ ವೈದ್ಯಕೀಯ ವರದಿಯನ್ನು ಪಡೆದುಕೊಳ್ಳುವುದು ಅಗತ್ಯವಾಗಿದೆಯೆಂಬುದನ್ನು ಮಾತ್ರ ಪ್ರಕರಣವಾಗುತ್ತದೆಯೆಂದು ಅಭಿಪ್ರಾಯಪಡಲಾಗಿದೆ. ಪ್ರಸ್ತುತ ಪ್ರಕರಣದಲ್ಲಿ, ಅಂಥ ದಸ್ತಾವೇಜುಗಳು ಲಭ್ಯವಾಗುತ್ತಿವೆ, ಆದರೆ ಪೊಲೀಸರ ಪ್ರಕಾರ ಖೋಟಾ ಆಗಿವೆಯೆಂಬುದು ದೃಢವಾಗುತ್ತದೆ, ಅಪೀಲುದಾರನ ವಯಸ್ಸಿನ ನಿರ್ಧರಣೆಗೆ ವೈದ್ಯಕೀಯ ವರದಿಯನ್ನು ಪಡೆದುಕೊಳ್ಳುವುದು ಅಗತ್ಯವಾಗಿರುತ್ತದೆ – ಪ್ರಕರಣವನ್ನು ವಿಲೇವಾರಿ ಮಾಡಿದ ನಂತರವೂ ಸಹ ಯಾವುದೇ ಸಮಯದಲ್ಲಿ ಬಾಲಾಪರಾಧತೆಯ ಪ್ರಶ್ನೆಯನ್ನು ಎತ್ತುವ ಹಕ್ಕನ್ನು ಬಾಲಕ ನ್ಯಾಯ ಅಧಿನಿಯಮ, 2000 ದ ಎಸ್.7–ಎ ಪ್ರಕರಣ ಆಪಾದಿತನಿಗೆ ನೀಡಿರುವುದರಿಂದ ವೈದ್ಯಕೀಯ ವರದಿಯನ್ನು ಕೋರುವಲ್ಲಿ ಅಡಚಣೆ ಆಗುವುದೆಂದು ವಿಳಂಬವನ್ನು ಮಾಡತಕ್ಕದ್ದಲ್ಲ – ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ಅಧಿನಿಯಮ, 2000, ಎಸ್ 7–ಎ.*

*ಡಿ. ಬಾಲಕ ನ್ಯಾಯ (ಮಕ್ಕಳ ಪಾಲನೆ ಮತ್ತು ಸಂರಕ್ಷಣೆ) ಅಧಿನಿಯಮ, 2000, ಬಾಲಾಪರಾಧತೆಯ ಕ್ಲೇಮು 2(ಕೆ) ಮತ್ತು (ಐ) ಪ್ರಕರಣಗಳು – ಎರಡು ದೃಷ್ಟಿಕೋನಗಳು ಸಾಧ್ಯವಾಗಿದ್ದರೆ – ಬಾಲಕ ನ್ಯಾಯ ಅಧಿನಿಯಮ, 2000 ಪ್ರಯೋಜನಕರವಾದ ಶಾಸನವಾಗಿದೆಯೆಂದು ಅಭಿಪ್ರಾಯಪಡಲಾಗಿದೆ – ಎರಡು ದೃಷ್ಟಿಕೋನಗಳಿದ್ದರೆ, ಬಾಲಾಪರಾಧತೆಯ ಕ್ಲೇಮನ್ನು ಸಮರ್ಥಿಸುವ ದೃಷ್ಟಿಕೋನ ಪರವಾಗಿ ಮಾನದಂಡಗಳು ಏರುಪೇರಾಗುತ್ತವೆ.*

*(ಒತ್ತು ನೀಡಲಾಗಿದೆ)*

22. ಅರ್ಜಿದಾರ / ಆಪಾದಿತನ ವಯಸ್ಸನ್ನು ನಿರ್ಧರಿಸುವಲ್ಲಿ ಮೇಲಿನ ಸದರಿ ನಿಯಮಗಳು ಮತ್ತು ಮಾರ್ಗಸೂಚಿಗಳನ್ನು ವಾಸ್ತವವಾಗಿ ಅಧಿವಿಚಾರಣಾ ನ್ಯಾಯಾಲಯವು ಅನ್ವಯಿಸಿದೆಯೇ ಎಂಬುದನ್ನು ಈಗ ನಾನು ಪರಿಗಣಿಸುತ್ತೇನೆ. ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ಶಾಲಾ ಪ್ರಮಾಣ ಪತ್ರಗಳನ್ನು ನಿಶಾನೆ ಪಿ.16 ರಿಂದ ನಿಶಾನೆ ಪಿ.20 ಎಂದು ಗುರುತು ಮಾಡಲಾಗಿದೆ. ಸಾಕ್ಷ್ಯದ ಕ್ರಮದ ಅವಧಿಯಲ್ಲಿ, ಕೆಲವು ಇತರ ದಸ್ತಾವೇಜುಗಳು – ನಿಶಾನೆ ಪಿ.35 ರಿಂದ ಪಿ.38 ಎಂದರೆ ಮೆಹ್ಕರ್ ಡಿ. ಕೇಂದ್ರವು ನಿರ್ವಹಿಸಿದ ರಿಜಿಸ್ಟರುಗಳು ಮತ್ತು ದಸ್ತಾವೇಜುಗಳನ್ನು, ಆಪಾದಿತನ ಮತ್ತು ಆತನ ಸಹೋದರಿಯ ಜನನ ದಿನಾಂಕವನ್ನು ತೋರಿಸಲು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, ಅವುಗಳನ್ನು ನಾನು ಈಗಾಗಲೇ ಮೇಲೆ ಉಲ್ಲೇಖಿಸಿರುತ್ತೇನೆ. ಈಗಾಗಲೇ ಹೇಳಲಾದಂತೆ, ವಿವಿಧ ವೈದ್ಯರ ಇಬ್ಬರು ಅಭಿಪ್ರಾಯಗಳು ಎಂದರೆ ಪ್ರಾಸಾ–8 ಮತ್ತು ಪ್ರಾಸಾ–18 ರ ಅಭಿಪ್ರಾಯಗಳು ಇರುತ್ತವೆ. ಎರಡು ಜೊತೆ ದಸ್ತಾವೇಜುಗಳು ಇರುವಾಗ, ನ್ಯಾಯಾಲಯವು, ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ಆ ದಸ್ತಾವೇಜುಗಳನ್ನು ಅಥವಾ ಯಾವುದೇ ದಸ್ತಾವೇಜುಗಳನ್ನು, ಅವುಗಳು ಖೋಟಾ ಆಗಿವೆ ಎನ್ನುವ ಆಧಾರದ ಮೇಲಿನ ಯಾವುದೇ ಕಾರಣಕ್ಕಾಗಿ ನಂಬಲಾಗದು ಎನ್ನುವ **ಯಾವುದೇ ನಿರ್ಣಯಕ್ಕೆ ಬಂದಿದ್ದರೆ ಅಥವಾ ಅನ್ಯಥಾ** ಮತ್ತು ನ್ಯಾಯಾಲಯವು, ಅಂಥ ದಸ್ತಾವೇಜಿನ ಆಧಾರದ ಮೇಲೆ ನಿರ್ಣಯವನ್ನು ನೀಡಲಾಗುವುದಿಲ್ಲ ಎಂಬ ಯಾವುದೇ ನಿರ್ಣಯಕ್ಕೆ ಬಂದಿದ್ದರೆ, ಆಗ ಮಾತ್ರ ನ್ಯಾಯಾಲಯಕ್ಕೆ ವೈದ್ಯಕೀಯ ಮಂಡಳಿಯು ಪರೀಕ್ಷಿಸಿದ ಆಪಾದಿತನನ್ನು ಕರೆಸಿಕೊಳ್ಳುವ ಗತ್ಯಂತರವಿರುತ್ತದೆ ಮತ್ತು ಇದಾದ ನಂತರ ವೈದ್ಯಕೀಯ ಮಂಡಳಿಯ ಅಭಿಪ್ರಾಯವನ್ನು ಪರಿಗಣಿಸಬಹುದು. ಈ ನಿರ್ದಿಷ್ಟ ಪ್ರಕರಣದಲ್ಲಿ, ಈಗಾಗಲೇ ನಾನು ಸೂಚಿಸಲಾದಂತೆ, ತನಿಖಾಧಿಕಾರಿ ಅಥವಾ ನ್ಯಾಯಾಲಯವು, ಅವು ಖೋಟಾ ಆಗಿವೆಯೇ ಎಂಬ ಬಗ್ಗೆ ಅಥವಾ ಆ ದಸ್ತಾವೇಜುಗಳು ಗಂಭೀರ ಸಂದೇಹವನ್ನು ಸೃಜಿಸುತ್ತವೆ ಎಂಬ ಬಗ್ಗೆಯಾಗಲಿ ದಾಖಲೆಯಲ್ಲಿರುವ ದಸ್ತಾವೇಜೀಯ ಸಾಕ್ಷ್ಯಕ್ಕೆ ಸಂಬಂಧಪಟ್ಟಂತೆ ಯಾವುದೇ ಅಭಿಪ್ರಾಯವನ್ನು ನೀಡಿರುವುದಿಲ್ಲ. ಆದುದರಿಂದ, ನ್ಯಾಯಾಲಯವು ಅಂಥ ದಸ್ತಾವೇಜುಗಳ ಆಧಾರದ ಮೇಲೆ ಆಪಾದಿತನ ವಯಸ್ಸನ್ನು ನಿರ್ಧರಿಸಲಾಗುವುದಿಲ್ಲ, ಆದುದರಿಂದ ಇದು ವೈದ್ಯಕೀಯ ಸಾಕ್ಷ್ಯವನ್ನು ಆಧರಿಸಬಹುದು.

23. ಇದು ಇರಬಹುದಾದ ಹಾಗೆ, ವೈದ್ಯಕೀಯ ಸಾಕ್ಷ್ಯಕ್ಕೆ ಸಂಬಂಧಪಡುವಷ್ಟರ ಮಟ್ಟಿಗೆ, ಈ ಪ್ರಕರಣದಲ್ಲಿ, ಇಬ್ಬರು ಪ್ರತ್ಯೇಕ ವೈದ್ಯರುಗಳು ಎಂದರೆ ಪ್ರಾಸಾ.8 ಮತ್ತು ಪ್ರಾಸಾ.18 ಪ್ರತ್ಯೇಕ ಅಭಿಪ್ರಾಯವನ್ನು ನೀಡಿದ್ದಾರೆ. ಮೇಲೆ ತಿಳಿಸಲಾದ ಸದರಿ ನಿಯಮಗಳು, 2007 ರ 12ನೇ ನಿಯಮದ ಪ್ರಕಾರ ವೈದ್ಯಕೀಯ ಮಂಡಳಿಯು ಘೋಷಿಸದಿರುವ ಪ್ರತ್ಯೇಕ ವೈದ್ಯರು ಅಂಥ ಅಭಿಪ್ರಾಯವನ್ನು ನೀಡಿರುವುದಿಲ್ಲ. ನಿಯಮಗಳು, 2007 ರ 12ನೇ ನಿಯಮದ ಮೇರೆಗೆ, ಅಪರಾಧದ ದಿನಾಂಕದಂದು ಇದ್ದಂತೆ ಬಾಲಾಪರಾಧಿಯ ಅಥವಾ ಮಗುವಿನ ವಯಸ್ಸನ್ನು ಘೋಷಿಸುವ, ಯುಕ್ತವಾಗಿ ರಚಿಸಲಾದ ವೈದ್ಯಕೀಯ ಮಂಡಳಿಗೆ ಆಪಾದಿತವನ್ನು ಕಳುಹಿಸಬೇಕಾಗುತ್ತದೆ ಎಂಬುದು ಕಡ್ಡಾಯವಾಗಿರುತ್ತದೆ. ಆದುದರಿಂದ ಈ ನಿಯಮವನ್ನು ತನಿಖಾಧಿಕಾರಿಯಾಗಲಿ ಅಥವಾ ಬಾಲಕ ನ್ಯಾಯ ಮಂಡಳಿಯಾಗಲಿ ಅಥವಾ ವಿಶೇಷ ನ್ಯಾಯಾಲಯವಾಗಲಿ ಅನುಸರಿಸಿಲ್ಲವೆಂಬುದು ಸ್ಫಟಿಕದಷ್ಟು ಸ್ಪಷ್ಟವಾಗಿದೆ. ನಿರ್ದಿಷ್ಟ ವಿಷಯವನ್ನು ನಿರ್ದಿಷ್ಟ ರೀತಿಯಲ್ಲಿ ಮಾಡಬೇಕಾಗುತ್ತದೆ. ಕಾನೂನಿನ ಅಡಿಯಲ್ಲಿ ಮಾನ್ಯ ಮಾಡದಿರುವ ಅಥವಾ ಉದ್ದೇಶಿಸದಿರುವ ಇತರ ಯಾವುದೇ ರೀತಿಯಲ್ಲಿ, ಇದು ಯುಕ್ತವಾಗಿ ಮತ್ತು ಸರಿಯಾಗಿ ಕಂಡುಬಂದರೂ ಸಹ ಆದರೆ ಶಾಸನಬದ್ಧ ಅಗತ್ಯತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಅಂಥ ಪ್ರಕ್ರಿಯೆಯನ್ನು ಅಂಗೀಕರಿಸಲಾಗುವುದಿಲ್ಲ. ಆದುದರಿಂದ, ಈ ಪ್ರಕರಣದಲ್ಲಿ, ವಿಶೇಷ ನ್ಯಾಯಾಲಯವು ಯಾವುದೇ ವಿಧದಲ್ಲಿ ನ್ಯಾಯಾಲಯದ ಮುಂದೆ ಲಭ್ಯವಿರುವ ದಸ್ತಾವೇಜುಗಳನ್ನು ಅವಲಂಬಿಸಿರುವುದಿಲ್ಲ ಎಂಬ ಮತ್ತು ಅವು ಸಂದೇಹಾಸ್ಪದವಾಗಿವೆ ಅಥವಾ ಖೋಟ ಆಗಿವೆ ಎನ್ನುವ ಅಥವಾ ಯಾವುದೇ ಸುಳ್ಳು ಸೃಷ್ಟಿ ಎಂಬ ಯಾವುದೇ ನಿರ್ಣಯಕ್ಕೆ ಬಂದಿದ್ದರೆ ಅಥವಾ ಯಾವುದೇ ವಸ್ತುಗಳು ಬಂದಿದ್ದರೆ, ಆಗ ಮಾತ್ರ ಯಾವ ಸನ್ನಿವೇಶಗಳ ಮೇರೆಗೆ ನ್ಯಾಯಾಲಯವು ಆ ದಸ್ತಾವೇಜುಗಳನ್ನು ಅವಲಂಬಿಸಲು ಸಾಧ್ಯವಿಲ್ಲ ಎಂಬ ನಿರ್ಣಯವನ್ನು ನೀಡುವ ಮೂಲಕ ಮತ್ತು ತದನಂತರ ವೈದ್ಯಕೀಯ ಅಭಿಪ್ರಾಯವನ್ನು ಕೋರುವ ಉದ್ದೇಶಕ್ಕಾಗಿ ಕಾನೂನಿಗನುಸಾರವಾಗಿ ಯುಕ್ತವಾಗಿ ರಚಿಸಲಾದ ವೈದ್ಯಕೀಯ ಮಂಡಳಿಗೆ ಆಪಾದಿತನನ್ನು ಅಥವಾ ಆಪಾದಿತ ಬಾಲಪರಾಧಿಯನ್ನು ಕಳುಹಿಸಬೇಕಾಗುತ್ತದೆ.

24. ಮಾನ್ಯ ವಿಶೇಷ ನ್ಯಾಯಾಧೀಶರು ಮತ್ತು ಬಾಲಕ ನ್ಯಾಯ ಮಂಡಳಿ ಹಾಗೂ ತನಿಖಾಧಿಕಾರಿಯವರೂ ಹೊರಡಿಸಿದ ಆದೇಶವನ್ನು ಅವಗಾಹಿಸಿದ ನಂತರ, ಮೇಲ್ಕಂಡ ಸದರಿ ಪ್ರಕ್ರಿಯೆಯನ್ನು ಅನುಸರಿಸಿರುವುದಿಲ್ಲ. ಮಾನ್ಯ ವಿಶೇಷ ನ್ಯಾಯಾಧೀಶರು, ಆಪಾದಿತನ ವಯಸ್ಸನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಮತ್ತು ಪ್ರಾ.ಸಾ.8 ಮತ್ತು ಪ್ರಾಸಾ.18 ನೀಡಿದ ವೈದ್ಯಕೀಯ ವರದಿ ಮತ್ತು ಅವರು ಹಾಜರುಪಡಿಸಿದ ದಸ್ತಾವೇಜುಗಳ ಕುರಿತು ಸವಿವರವಾಗಿ ಚರ್ಚಿಸಲಾಯಿತು. ನನ್ನ ಅಭಿಪ್ರಾಯದಲ್ಲಿ, ಮಾನ್ಯ ವಿಶೇಷ ನ್ಯಾಯಾಧೀಶರು ಅಳವಡಿಸಿಕೊಂಡು ಸದರಿ ಪ್ರಕ್ರಿಯೆಯು ಸದರಿ ನಿಯಮಗಳು, 2007ರ 12ನೇ ನಿಯಮದ ಮೇರೆಗೆ ಉದ್ದೇಶಿಸಲಾದ ಪ್ರಕ್ರಿಯೆಗೆ ವಿರುದ್ಧವಾಗಿದೆ. ಈ ಹಿನ್ನೆಲೆಯಲ್ಲಿ, ಆದೇಶವು ತಳ್ಳಿಹಾಕಲು ಅರ್ಹವಾಗಿರುತ್ತದೆ.

25. ಮೇಲಿನ ಸದರಿ ಸನ್ನಿವೇಶಗಳಲ್ಲಿ, ದಾಖಲೆಯಲ್ಲಿರುವ ಕೆಲವು ದಸ್ತಾವೇಜೀಯ ಸಾಕ್ಷ್ಯವನ್ನು ಅವಲಂಬಿಸಿದ್ದಾಗ, ನಿರ್ದಿಷ್ಟವಾಗಿ ಶಾಲಾ ದಾಖಲೆಗಳನ್ನು ಮತ್ತು ಮಾನ್ಯ ವಿಶೇಷ ನ್ಯಾಯಾಧೀಶರು ಆದೇಶದಲ್ಲಿ ವಿವರಿಸಲಾದಂತೆ ಮೆಹ್ಕರ್ ಡಿ. ಕೇಂದ್ರವು ನಿರ್ವಹಿಸಿದ ದಾಖಲೆಗಳನ್ನು ಸಹ, ಅವು ಸುರಕ್ಷಿತವಾಗಿರಬಹುದಾದ ಮತ್ತು ಲೋಪದೋಷಗಳಿಲ್ಲದೆ ಅವಲಂಬಿತವಾಗಿರುವ ದಸ್ತಾವೇಜುಗಳಾಗಿವೆಯೇ ಎಂಬುದನ್ನು ಪರೀಕ್ಷಿಸಬೇಕಾಗುತ್ತದೆ ಅಥವಾ ಆ ದಸ್ತಾವೇಜುಗಳಿಗೆ ಸಂಬಂಧಪಟ್ಟಂತೆ ಕೆಲವು ಸಂದೇಹಗಳಿರುವುದರಿಂದ ಆ ದಸ್ತಾವೇಜುಗಳನ್ನು ಯಾವುದೇ ಕಾರಣಕ್ಕಾಗಿ ಅವಲಂಬಿಸಲು ಸಾಧ್ಯವಾಗದಿದ್ದರೆ, ಆಗ ನ್ಯಾಯಾಲಯವು ವೈದ್ಯಕೀಯ ಮಂಡಳಿಗೆ ಆಪಾದಿತನನ್ನು ಕಳುಹಿಸಬಹುದು ಮತ್ತು ಆಗ, ವೈದ್ಯಕೀಯ ಮಂಡಳಿಯಿಂದ ಅಭಿಪ್ರಾಯವನ್ನು ಪಡೆದುಕೊಂಡ ನಂತರ ಈ ಸಂಬಂಧದಲ್ಲಿ ನ್ಯಾಯಾಲಯವು, ಯುಕ್ತ ನಿರ್ಣಯವನ್ನು ತೆಗೆದುಕೊಳ್ಳಬಹುದು. ಮಾನ್ಯ ವಿಶೇಷ ನ್ಯಾಯಾಧೀಶರು, ನಿಶಾನೆ ಪಿ. 35 ರಿಂದ ಪಿ. 38 ವರೆಗಿನ ದಸ್ತಾವೇಜುಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ, ಆ ದಸ್ತಾವೇಜುಗಳಲ್ಲಿ ಸದರಿ ದಸ್ತಾವೇಜಿನ ಕೆಲವು ಅಂಶಗಳನ್ನು ಖೋಟಾ ಮಾಡಲು ಪ್ರಯತ್ನಿಸಲಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದಾಗ್ಯೂ, ಕೆಲವು

ದಸ್ತಾವೇಜುಗಳ ಒಂದು ಭಾಗವನ್ನು ಅವರು ಅವಲಂಬಿಸಿದ್ದು, ಪ್ರಾಸಾ 18 ಮತ್ತು ನಿಶಾನೆ ಪಿ.31 ರಿಂದ 34 ರವರೆಗಿನ ನಿಶಾನೆಗಳ ಸಾಕ್ಷ್ಯಕ್ಕೆ ಪುಷ್ಟಿ ನೀಡುವಲ್ಲಿ ಕೈಚಳಕ ತೋರಿಸಲಾದಂತಹ (ಆಪಾದಿತನಿಗೆ ಅನುಕೂಲಕರವಾಗುವ) ಅದೇ ದಸ್ತಾವೇಜಿನ ಇತರ ಭಾಗವನ್ನು ತಳ್ಳಿಹಾಕಿದ್ದಾರೆ. ಮೇಲಿನ ಸದರಿ ಸನ್ನಿವೇಶಗಳ ಅಡಿಯಲ್ಲಿ ಮಾನ್ಯ ವಿಶೇಷ ನ್ಯಾಯಾಧೀಶರು ಆ ದಸ್ತಾವೇಜು ಎರಡು ದೃಷ್ಟಿಕೋನಗಳನ್ನು ನೀಡುವಾಗ ಅನಂಗೀಕಾರದ ವೈದ್ಯಕೀಯ ಸಾಕ್ಷ್ಯದಿಂದ ಕೂಡಿರುವ ಅಂಥ ಸಾಕ್ಷ್ಯವನ್ನು ಇನ್ನೂ ನ್ಯಾಯಾಲಯವು ನಿರ್ದೋಷಯುಕ್ತವಾಗಿ ಅವಲಂಬಿಸಿದೆಯೇ ಎಂಬ ಬಗ್ಗೆ ತಮ್ಮ ನ್ಯಾಯಿಕ ವಿವೇಚನೆಯನ್ನು ಅನ್ವಯಿಸಬೇಕು. ಆದುದರಿಂದ ಈ ಸಂಬಂಧದಲ್ಲಿ ಮಾನ್ಯ ವಿಶೇಷ ನ್ಯಾಯಾಧೀಶರು, ವಯಸ್ಸಿನ ಪ್ರಮಾಣ ಪತ್ರವನ್ನು ನೀಡುವ ಸಕ್ಷಮತೆಯು ವೈದ್ಯಕೀಯ ಮಂಡಳಿಯೊಂದಿಗೆ ನಿಹಿತವಾಗಿದೆಯೆಂದು ನಿಯಮವು ಉದ್ದೇಶಿಸಿರುವಂತೆ ಸಕ್ಷಮನಲ್ಲದ ವ್ಯಕ್ತಿಯು ಹೊರಡಿಸಿದ ವೈದ್ಯಕೀಯ ಸಾಕ್ಷ್ಯವನ್ನು ಅವಲಂಬಿಸುವಲ್ಲಿ ಗಂಭೀರ ದೋಷವನ್ನು ಎಸಗಿದ್ದಾರೆ.

26. ಬಾಲಕ ನ್ಯಾಯ (ಸಿವಿಲ್ ಪ್ರಕ್ರಿಯಾ ಸಂಹಿತೆ) ಅಧಿನಿಯಮ, 2000 ಅಥವಾ ಪೋಕ್ಸೊ ಅಧಿನಿಯಮದ ಮೇರೆಗೆ ಅಥವಾ ಬಾಲಾಪರಾಧಿ ನಿಯಮಗಳು, 2007ರ ಮೇರೆಗೆ 'ವೈದ್ಯಕೀಯ ಮಂಡಳಿ' ಎಂಬ ಪದವನ್ನು ಪರಿಭಾಷಿಸಿಲ್ಲ. ಕಾಲಿನ್ಸ್ ನಿಘಂಟುವಿನ ಪ್ರಕಾರ' ವೈದ್ಯಕೀಯ ಮಂಡಳಿಯ ನಿಘಂಟಿನ ಅರ್ಥವ್ಯಾಪ್ತಿಯನ್ನು ಈ ಮುಂದಿನಂತೆ ವಿವರಿಸಲಾಗಿದೆ:–

> *"ವೈದ್ಯಕೀಯ ಮಂಡಳಿ" – ವೈದ್ಯಕೀಯ ವಿಷಯಗಳ ಕುರಿತು ಅಭಿಪ್ರಾಯಗಳನ್ನು ನೀಡಲು ಅರ್ಹರಾದ ಜನರ ಒಂದು ಸಮೂಹ".*

ಸಾಮಾನ್ಯ ವೈದ್ಯಕೀಯ ನಿಘಂಟಿನ ಪ್ರಕಾರ 'ವೈದ್ಯಕೀಯ ಮಂಡಳಿ' ಯ ಪರಿಭಾಷೆಯನ್ನು ಈ ಮುಂದಿನಂತೆ ವಿವರಿಸಲಾಗಿದೆ:–

*"ವೈದ್ಯಕೀಯ ಮಂಡಳಿ" – ಮೇಲ್ವಿಚಾರಣೆ, ವ್ಯವಸ್ಥಾಪನೆ, ತನಿಖಾ ಅಥವಾ ಸಲಹಾ ಅಧಿಕಾರಗಳನ್ನು ಹೊಂದಿರುವ ವ್ಯಕ್ತಿಗಳ ಒಂದು ಸಮೂಹ."*

27. ಮೇಲಿನ ಸದರಿ ಪರಿಭಾಷೆಯು, ಬಾಲಾಪರಾಧ ನಿರ್ಣಯ (ಸಿವಿಲ್ ಪ್ರಕ್ರಿಯಾ ಸಂಹಿತೆ) ನಿಯಮಗಳು, 2007 ರ 12 ನೇ ನಿಯಮದ ಮೇರೆಗೆ ಉದ್ದೇಶಿಸಲಾದಂತೆ ವಯಸ್ಸನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಆ ಕ್ಷೇತ್ರದಲ್ಲಿನ ಇಬ್ಬರು ಅಥವಾ ಹೆಚ್ಚಿನ ತಜ್ಞರುಗಳನ್ನು ಒಳಗೊಂಡಿರುವ "ವೈದ್ಯಕೀಯ ಮಂಡಳಿಯನ್ನು ಸರ್ಕಾರವು ರಚಿಸಬೇಕು ಎಂಬ ಚಿತ್ರಣವನ್ನು ಸ್ಪಷ್ಟವಾಗಿ ನೀಡುತ್ತದೆ. ತನಿಖಾ ಅಧಿಕಾರಿಗಳು ಮತ್ತು ನ್ಯಾಯಾಲಯಕ್ಕೆ ಅನುಕೂಲ ಕಲ್ಪಿಸುವ ಸಲುವಾಗಿ, ಸರ್ಕಾರವು ಪ್ರತಿಯೊಂದು ಮತ್ತು ಪ್ರತಿಯೊಂದು ಜಿಲ್ಲೆಯಲ್ಲಿ ಸರ್ಕಾರಿ ಆಸ್ಪತ್ರೆಗಳನ್ನು ನಿರ್ಮಿಸಬೇಕೆಂಬುದು ಅಗತ್ಯವಾಗಿರುತ್ತದೆ. ಆದ್ಯತಾನುಸಾರವಾಗಿ ವೈದ್ಯಕೀಯ ಮಂಡಳಿಯು ಶರೀರ ಶಾಸ್ತ್ರ ವಿಜ್ಞಾನಿ, ದಂತ ಪರೀಕ್ಷಕ (ತಜ್ಞ) ರೇಡಿಯಾಲಜಿಸ್ಟ್ ಮತ್ತು ವಿಧಿ ವಿಜ್ಞಾನ ತಜ್ಞರುಗಳಂಥ ತಜ್ಞರನ್ನು ಒಳಗೊಂಡಿರತಕ್ಕದ್ದು ಹಾಗೆಯೇ ಅವರು ಸಂಬಂಧಪಟ್ಟ ಪರೀಕ್ಷೆಯನ್ನಾಧರಿಸಿ ಅವರ ಪ್ರತ್ಯೇಕ ವರದಿಯನ್ನು ನೀಡತಕ್ಕದ್ದು ಮತ್ತು ಅದನ್ನು ವರದಿಯಲ್ಲಿ ಸೂಚಿಸತಕ್ಕದ್ದು ಮತ್ತು ಬಾಲಾಪರಾಧ ನಿರ್ಣಯ (ಸಿವಿಲ್ ಪ್ರಕ್ರಿಯಾ ಸಂಹಿತೆ) ನಿಯಮಗಳು, 2007 ರ 12 ನೇ ನಿಯಮದ ಮೇರೆಗೆ ಉದ್ದೇಶಿಸಲಾದಂಥ ಒಂದು ವರ್ಷದ ಅಂಚಿನಲ್ಲಿ ಅಪರಾಧದ ದಿನಾಂಕದಂದು ಇದ್ದಂತೆ ವಯಸ್ಸಿನ ಬಗ್ಗೆ ಅಂತಿಮ ಅಭಿಪ್ರಾಯವನ್ನು ಮಂಡಳಿಯ ಅಧ್ಯಕ್ಷರನ್ನು ಆಧರಿಸಿ ನೀಡತಕ್ಕದ್ದು. ಅಲ್ಲದೆ ಈ ನಿಯಮದ ಪ್ರಕಾರ ವೈದ್ಯಕೀಯ ಮಂಡಳಿಯು ವಯಸ್ಸಿನ ವೈದ್ಯಕೀಯ ಪರೀಕ್ಷೆಯನ್ನು ನಡೆಸತಕ್ಕದ್ದು ಮತ್ತು ಆ ಸಂಬಂಧದಲ್ಲಿ ಮಾಡಿರುವ ಕೋರಿಕೆಯ 15 ದಿನಗಳಿಗಿಂತ ತಡವಾಗಿರದ ವರದಿಯನ್ನು ನೀಡತಕ್ಕದ್ದು.

28. ಮೇಲಿನ ಸದರಿ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯಕ್ಕೆ ಮತ್ತು ಕಾನೂನಿನ ಸಂಘರ್ಷವಿರುವ ಬಾಲಾಪರಾಧಿಯ ವಯಸ್ಸನ್ನು ನಿರ್ಧರಿಸುವುದಕ್ಕೆ ಸಂಬಂಧಪಟ್ಟಿರುವ ಇತರ ಹಿತಾಸಕ್ತಿದಾರರಿಗೆ ಸದರಿ ನಿರ್ದೇಶನಗಳನ್ನು ನೀಡುವುದು ಈ ನ್ಯಾಯಾಲಯಕ್ಕೆ ನ್ಯಾಯಯುತ ಮತ್ತು ಅಗತ್ಯವಾಗಿರುತ್ತದೆ.

29. ಕಾನೂನಿನ ಸಂಘರ್ಷಣೆಯಲ್ಲಿರುವ ಬಾಲಾಪರಾಧಿಯ ವಯಸ್ಸನ್ನು ನಿರ್ಧರಿಸಲು ಜಿಲ್ಲಾ ಆಸ್ಪತ್ರೆಗಳಲ್ಲಿ ಆ ಕ್ಷೇತ್ರದಲ್ಲಿ ತಜ್ಞರಾಗಿರುವ ಶರೀರ ವಿಜ್ಞಾನಿ, ದಂತ ಪರೀಕ್ಷಕ ರೇಡಿಯಾಲಜಿಸ್ಟ್ ಮತ್ತು ವಿಧಿ ವಿಜ್ಞಾನ ತಜ್ಞರನ್ನು ಒಳಗೊಂಡಿರುವ ವೈದ್ಯಕೀಯ ಮಂಡಳಿಗಳನ್ನು ರಚಿಸಲು ಕರ್ನಾಟಕ ರಾಜ್ಯಕ್ಕೆ ಈ ಮೂಲಕ ನಿರ್ದೇಶಿಸಿದ್ದು, ಸರ್ಕಾರವು, ಸಂಬಂಧಪಟ್ಟ ಪರೀಕ್ಷೆಯನ್ನಾಧರಿಸಿದ ಅವನ ಪ್ರತ್ಯೇಕ ವರದಿಯನ್ನು ಪ್ರತಿಯೊಬ್ಬ ತಜ್ಞನು ನೀಡತಕ್ಕದ್ದು ಮತ್ತು ಅದನ್ನು ವರದಿಯಲ್ಲಿ ಸೂಚಿಸತಕ್ಕದ್ದು ಮತ್ತು ಮಂಡಳಿಯ ಅಧ್ಯಕ್ಷನನ್ನು ಆಧರಿಸಿ, ಬಾಲಾಪರಾಧ ನಿರ್ಣಯ (ಸಿವಿಲ್ ಪ್ರಕ್ರಿಯಾ ಸಂಹಿತೆ) ನಿಯಮಗಳು, 2007 ರ 12 ನೇ ನಿಯಮದ ಮೇರೆಗೆ ಉದ್ದೇಶಿಸಲಾದಂತೆ ಒಂದು ವರ್ಷದ ಅಂಚಿನೊಳಗೆ ಅಪರಾಧದ ದಿನಾಂಕದಂದು ಇದ್ದಂತೆ ವ್ಯಕ್ತಿಯ ವಯಸ್ಸಿಗೆ ಸಂಬಂಧಿಸಿದ ಅಂತಿಮ ವರದಿಯನ್ನು ನೀಡತಕ್ಕದ್ದೆಂದು ಎಂದು ರಾಜ್ಯದಲ್ಲಿನ ಸದರಿ ವೈದ್ಯಕೀಯ ಮಂಡಳಿಗೆ ನಿರ್ದೇಶನಗಳನ್ನು ನೀಡಬೇಕು. ಅಲ್ಲದೆ, ವೈದ್ಯಕೀಯ ಮಂಡಳಿಯು ಬಾಲಾಪರಾಧಿಯ ವಯಸ್ಸಿಗೆ ಸಂಬಂಧಪಟ್ಟ ವೈದ್ಯಕೀಯ ಪರೀಕ್ಷೆಯನ್ನು ನಡೆಸತಕ್ಕದ್ದೆಂದು ಮತ್ತು ಆ ಸಂಬಂಧದಲ್ಲಿ ಮಾಡಿರುವ ಕೋರಿಕೆಯ ದಿನಾಂಕದಿಂದ 15 ದಿನಗಳಿಗೆ ತಡವಾಗದಂತೆ ವರದಿಯನ್ನು ನೀಡತಕ್ಕದ್ದೆಂದು ಮತ್ತಷ್ಟು ನಿರ್ದೇಶನಗಳನ್ನು ನೀಡಬೇಕು.

30. ವೈದ್ಯಕೀಯ ಇಲಾಖೆಯ ಮೂಲಕ ಕರ್ನಾಟಕ ರಾಜ್ಯವು ಎಲ್ಲಾ ತಜ್ಞರಿಗೆ ಅವರನ್ನು ವೈದ್ಯಕೀಯ ಮಂಡಳಿಯೆಂದು ಘೋಷಿಸಿರದ ಹೊರತು ವಯಸ್ಸಿನ ನಿರ್ಧರಣೆಗಾಗಿ ಅವರಿಗೆ ಉಲ್ಲೇಖಿಸಿದ ಕಾನೂನಿನ ಸಂಘರ್ಷಣೆಯಲ್ಲಿರುವ ಯಾರೇ ಬಾಲಾಪರಾಧಿಯ ಯಾವುದೇ ವಯಸ್ಸಿನ, ನಿರ್ಧರಣೆಯ ಪರೀಕ್ಷೆಯನ್ನು ಪ್ರತ್ಯೇಕವಾಗಿ ಅವರು ನಡೆಸತಕ್ಕದ್ದಲ್ಲವೆಂದು ರಾಜ್ಯದಲ್ಲಿನ ಜಿಲ್ಲಾ ವೈದ್ಯರುಗಳಿಗೆ ಪ್ರತ್ಯೇಕವಾಗಿ ಅವರು ನಡೆಸತಕ್ಕದ್ದಲ್ಲವೆಂದು ರಾಜ್ಯದಲ್ಲಿನ ಎಲ್ಲಾ ವೈದ್ಯರುಗಳಿಗೆ ಸೂಚಿಸುವುದು. ಬದಲಾಗಿ, ಯಾವುದೇ ಬಾಲಾಪರಾಧಿಯನ್ನು ವಯಸ್ಸಿನ ನಿರ್ಧರಣೆಗಾಗಿ ಅವರ ಬಳಿಗೆ ಕಳುಹಿಸಿದ್ದರೆ, ಅವರು ಅದನ್ನು ಜಿಲ್ಲಾ ತಜ್ಞರಿಗೆ ಅಥವಾ ಸಂಬಂಧಪಟ್ಟ ಪ್ರಾಧಿಕಾರಿಗಳ ಗಮನಕ್ಕೆ ತರತಕ್ಕದ್ದು; ಅವರು, ವೈದ್ಯಕೀಯ ಮಂಡಳಿಯನ್ನು ರಚಿಸತಕ್ಕದ್ದು, ಆಗ ಕಾನೂನಿನ ಸಂಘರ್ಷದಲ್ಲಿರುವ ಬಾಲಾಪರಾಧಿಯನ್ನು ಅದರ ವರದಿಗಾಗಿ ವೈದ್ಯಕೀಯ ಮಂಡಳಿಗೆ ಕಳುಹಿಸಿಕೊಡತಕ್ಕದ್ದು.

31. ಕರ್ನಾಟಕ ಪೊಲೀಸು ಮಹಾನಿರ್ದೇಶಕರು, ಎಲ್ಲಾ ತನಿಖಾಧಿಕಾರಿಗಳಿಗೆ ಅಗತ್ಯ ಸುತ್ತೋಲೆಗಳನ್ನು ಹೊರಡಿಸಲು ಈ ಮೂಲಕ ನಿರ್ದೇಶಿತರಾಗಿದ್ದು, ಬಾಲಪರಾಧ ನಿರ್ಣಯ (ಸಿಪಿಸಿ) ನಿಯಮಗಳು, 2007 ರ 12ನೇ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಲು ಪೋಕ್ಸೊ ಅಧಿನಿಯಮದ ಮೇರೆಗೆ ಅಪರಾಧಗಳನ್ನು ತನಿಖೆಮಾಡಲು ಅವರಿಗೆ ನೀಡಲಾಗಿದ್ದು, ಅವರು, ಮೆಟ್ರಿಕ್ಯುಲೇಷನ್ ಅಥವಾ ತತ್ಸಮಾನ ಪ್ರಮಾಣಪತ್ರಗಳನ್ನು ಅಥವಾ ಮೊದಲು ಹಾಜರಾದ ಶಾಲೆಯಿಂದ (ಆಟದ ಶಾಲೆಗಳನ್ನು ಹೊರತುಪಡಿಸಿ) ಜನನ ದಿನಾಂಕ ಪ್ರಮಾಣ ಪತ್ರವನ್ನು ಅಥವಾ ಕಾರ್ಪೊರೇಷನ್ ಅಥವಾ ಮುನಿಸಿಪಲ್ ಅಥವಾ ಪಂಚಾಯತ್‌ಗಳು ನೀಡಲಾದ ಜನನ ಪ್ರಮಾಣ ಪತ್ರಗಳನ್ನು ಸಂಗ್ರಹಿಸುವ ಎಲ್ಲಾ ಪ್ರಯತ್ನಗಳನ್ನು ಮಾಡತಕ್ಕದ್ದು ಮತ್ತು ಅಂಥ ಸಾಕ್ಷ್ಯಗಳಿಲ್ಲದಿದ್ದಲ್ಲಿ, ಅವರು ಕಾನೂನಿನ ಸಂಘರ್ಷಣೆಯಲ್ಲಿರುವ ಬಾಲಾಪರಾಧಿಯನ್ನು ವಯಸ್ಸಿನ ನಿರ್ಧರಣೆಗಾಗಿ ವೈದ್ಯಕೀಯ ಮಂಡಳಿಗೆ ಕಳಿಸತಕ್ಕದ್ದು ಅಥವಾ, ತನಿಖಾಧಿಕಾರಿಗಳು, ಮೇಲೆ ತಿಳಿಸಲಾದ ದಸ್ತಾವೇಜುಗಳು ಲಭ್ಯವಿದ್ದರೂ ಅವುಗಳಲ್ಲಿ ಕೈಚಳಕ ನಡೆದಿದೆಯೆಂದು ಅಥವಾ ಅವು ನಂಬಿಕೆಗೆ ಅರ್ಹವಾಗಿಲ್ಲವೆಂದು ಅಭಿಪ್ರಾಯಪಟ್ಟರೆ, ಆಗ ಮಾತ್ರ ಅವರು ವಯಸ್ಸಿನ ನಿರ್ಧರಣೆಗಾಗಿ ವೈದ್ಯಕೀಯ ಮಂಡಳಿಗೆ ಬಾಲಪರಾಧಿಯನ್ನು ಕಳುಹಿಸಬಹುದು.

32. ಪೊಲೀಸು ಮಹಾ ನಿರ್ದೇಶಕರು, ಪ್ರತಿಯನ್ನು ಪ್ರಸರಿಸುವ ಮೂಲಕ ಈ ಆದೇಶವನ್ನು ತಿಳಿಸಲು ಮತ್ತೆ ನಿರ್ದೇಶಿತರಾಗಿರುತ್ತಾರೆ ಮತ್ತು ***ಷಾ ನವಾಜ್*** ಮತ್ತು ***ಕುಲಾಯ್ ಇಬ್ರಾಹಿಂ @ ಇಬ್ರಾಹಿಂ,*** ಮೇಲಿನ ವರದಿಯಾದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು, ತಮ್ಮ ಪತ್ರದಲ್ಲಿ ನ್ಯಾಯಾಲಯಗಳು ಹೊರಡಿಸಿದ ನಿರ್ದೇಶನಗಳನ್ನು ಅನುಸರಿಸಲು ಮತ್ತು ಕಾನೂನಿನ ಸಂಘರ್ಷದಲ್ಲಿರುವ ಬಾಲಾಪರಾಧಿಯ ವಯಸ್ಸನ್ನು ನಿರ್ಧರಿಸುವ ಸಂಬಂಧ ಸ್ಫೂರ್ತಿ ನೀಡಲು ಅವರಿಗೆ ಅನುಕೂಲವಾಗುವಂತೆ ಎಲ್ಲಾ ಅಧಿಕಾರಿಗಳಿಗೆ ತಿಳಿಸಲು ನಿರ್ದೇಶಿತರಾಗಿರುವರು.

33. ಪೋಕ್ಸೊ ಅಧಿನಿಯಮದ ಮೇರೆಗೆ ಅಧಿಸೂಚಿಸಲಾದ ಎಲ್ಲಾ ವಿಶೇಷ ನ್ಯಾಯಾಧೀಶರು ಮತ್ತು ಕಾನೂನಿನ ಸಂಘರ್ಷದಲ್ಲಿರುವ ಬಾಲಾಪರಾಧಿಯ ವಯಸ್ಸನ್ನು

ನಿರ್ಧರಿಸುವ ಕಾರ್ಯವನ್ನು ವಹಿಸಿಕೊಂಡಿರುವ ಬಾಲಕ ನ್ಯಾಯ ಮಂಡಳಿಯ ಸದಸ್ಯರು, ಬಾಲಾಪರಾಧ ನ್ಯಾಯ (ಸಿಪಿಸಿ) ನಿಯಮಗಳು, 2007 ರ 12ನೇ ನಿಯಮದ ಅನುಸಾರ ಮೊದಲ ವಿಷಯದೊಂದಿಗೆ ವ್ಯವಹರಿಸಲು ಈ ಮೂಲಕ ನಿರ್ದೇಶಿತರಾಗಿದ್ದು, ಪೋಕ್ಸೊ ಅಧಿನಿಯಮದ 34ನೇ ಪ್ರಕರಣದ ಮೇರೆಗೆ ಸಕ್ಷಮ ಪ್ರಾಧಿಕಾರವು, ಆ ದಸ್ತಾವೇಜುಗಳು ನಂಬಲರ್ಹವಾಗಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಬಾಲಾಪರಾಧ ನ್ಯಾಯ (ಸಿಪಿಸಿ) ನಿಯಮಗಳು, 2007ರ 12ನೇ ನಿಯಮದ ಮೇರೆಗೆ ಉಲ್ಲೇಖಿಸಲಾದಂಥ ನ್ಯಾಯಾಲಯದ ಮುಂದೆ ಹಾಜರುಪಡಿಸಲಾದ ದಸ್ತಾವೇಜುಗಳ ಸಂಬಂಧದಲ್ಲಿ ತನ್ನ ನಿರ್ಣಯವನ್ನು ನೀಡತಕ್ಕ ನಂತರವಷ್ಟೇ ನಿರ್ದೇಶಿತರಾಗುವುದು, ಅವುಗಳನ್ನು ನಂಬಲರ್ಹವಾಗಿದ್ದರೆ, ಆಗ ಆ ದಸ್ತಾವೇಜುಗಳ ವಿಶ್ವಾಸಾರ್ಹತೆ ಮತ್ತು ನಂಬಿಕೆಗೆ ಸಂಬಂಧಿಸಿದ ತನ್ನ ನಿರ್ಣಯವನ್ನು ನೀಡತಕ್ಕದ್ದು ಮತ್ತು ಯಾವುದೇ ಕಾರಣಕ್ಕಾಗಿ, ನ್ಯಾಯಾಲಯವು ಆ ದಸ್ತಾವೇಜುಗಳು ನಂಬಲರ್ಹವಲ್ಲವೆಂದು ಮತ್ತು ದಸ್ತಾವೇಜುಗಳು ಖೋಟ ಎಂದು ಅಥವಾ ತಿದ್ದಲಾಗಿದೆಯೆಂಬ ನಿರ್ಣಯಕ್ಕೆ ಬಂದಿದ್ದರೆ ಆಗ ಮಾತ್ರ ವೈದ್ಯಕೀಯ ಸಾಕ್ಷ್ಯವನ್ನು ಅವಲಂಬಿಸಬಹುದು ಅಥವಾ ನ್ಯಾಯಾಲಯವು ದಸ್ತಾವೇಜುಗಳಿಗೆ ಸಂಬಂಧಪಟ್ಟಂತೆ ಯಾವುದೇ ಸಂದೇಹವನ್ನು ಹೊಂದಿದ್ದರೆ ಆಗ ಮಾತ್ರ ಇದನ್ನು, ಬಾಲಾಪರಾಧಿಯ ವಯಸ್ಸಿನ ನಿರ್ಧರಣೆಗಾಗಿ ಕಾನೂನಿನ ಸಂಘರ್ಷಣೆಯಲ್ಲಿರುವ ಬಾಲಾಪರಾಧಿಯುನ್ನು ವೈದ್ಯಕೀಯ ಮಂಡಳಿಗೆ ಕಳುಹಿಸಬಹುದು, ತದನಂತರ, ತೀರ್ಪನ್ನು ದಾಖಲಿಸುವ ಮೊದಲು ಯಾವುದೇ ಹಂತದಲ್ಲಿ ನ್ಯಾಯಾಲಯವು ಕಾನೂನಿನ ಸಂಘರ್ಷದಲ್ಲಿರುವ ಬಾಲಾಪರಾಧಿಯ ವಯಸ್ಸಿಗೆ ಸಂಬಂಧಪಟ್ಟಂತೆ ನಿರ್ಣಯವನ್ನು ನೀಡಬಹುದು. ವಿಶೇಷ ನ್ಯಾಯಾಲಯವು, ಕಾನೂನಿನ ಸಂಘರ್ಷದಲ್ಲಿರುವ ಬಾಲಾಪರಾಧಿಯು 18 ವರ್ಷಗಳಿಗಿಂತ ಕಡಿಮೆ ವಯಸ್ಸಿನವನೆಂಬ ನಿರ್ಣಯಕ್ಕೆ ಬಂದರೆ, ಆಗ ಪೋಕ್ಸೊ ಅಧಿನಿಯಮದ ಉಪಬಂಧಗಳ ಪ್ರಕಾರ ಹೆಚ್ಚಿನ ಎಲ್ಲಾ ವ್ಯವಹರಣೆಗಳಿಗಾಗಿ ಅವನನ್ನು ಬಾಲಾಪರಾಧ ನ್ಯಾಯ ಮಂಡಳಿಗೆ ಕಳುಹಿಸತಕ್ಕದ್ದು.

34. ಕರ್ನಾಟಕ ರಾಜ್ಯ ನ್ಯಾಯಿಕ ಅಕಾಡೆಮಿ ಮತ್ತು ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರಗಳನ್ನು, ಎಲ್ಲಾ ಹಿತಾಸಕ್ತಿದಾರರಿಗೆ ಯುಕ್ತ ಕಾನೂನು ಅರಿವು

ಕಾರ್ಯಗಳನ್ನು ನಡೆಸುವುದನ್ನು ನಿರ್ದೇಶಿಸುವುದೂ ಸಹ ಅಗತ್ಯವಾಗಿದ್ದು, ನಿರ್ದಿಷ್ಟವಾಗಿ, ಬಾಲಕ ನ್ಯಾಯ ಮಂಡಳಿಯ ಅಧ್ಯಕ್ಷರು ಅದರ ಸದಸ್ಯರುಗಳು ಮತ್ತು ಪೋಕ್ಸೊ ಅಧಿನಿಯಮದ ಮೇರೆಗೆ ವಿಶೇಷ ನ್ಯಾಯಾಲಯಗಳ ಪೀಠಾಸೀನ ಅಧಿಕಾರಿಗಳು, ಪೊಲೀಸು ಅಧಿಕಾರಿಗಳು ಮತ್ತು ಯಾವುದೇ ರೀತಿಯಲ್ಲಿ ಕಾನೂನಿನ ಸಂಘರ್ಷದಲ್ಲಿರುವ ಬಾಲಪರಾಧಿಯ ವಯಸ್ಸನ್ನು ನಿರ್ಧರಿಸುವ ಕಾರ್ಯವನ್ನು ವಹಿಸಿಕೊಂಡ ಹಿತಾಸಕ್ತಿದಾರರಾಗಿರುವ ವೈದ್ಯರುಗಳಿಗೆ ನಿರ್ದೇಶಿಸುವುದು ಅಗತ್ಯವಾಗಿದ್ದು, ಕಾನೂನಿನ ಸಂಘರ್ಷದಲ್ಲಿರುವ ಬಾಲಾಪರಾಧಿಗಳೊಂದಿಗೆ ವ್ಯವಹರಿಸಲು ಕಾನೂನಿನ ಅಗತ್ಯತೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಸಲುವಾಗಿ ಬಾಲಾಪರಾಧ ನ್ಯಾಯ (ಸಿಪಿಸಿ) ಅಧಿನಿಯಮ, 2000, ಬಾಲಾಪರಾಧ ನ್ಯಾಯ (ಸಿಪಿಸಿ) ನಿಯಮಗಳು, 2007 ಮತ್ತು ಪೋಕ್ಸೊ ಅಧಿನಿಯಮದ ಸಂಬಂಧದಲ್ಲಿಯೂ ಅವರಿಗೆ ತಿಳಿವಳಿಕೆ ನೀಡುವುದೂ ಸಹ ಅಗತ್ಯವಾಗಿದೆ.

35. ಮೇಲಿನ ಸದರಿ ಸನ್ನಿವೇಶಗಳಲ್ಲಿ ಮಾನ್ಯ ವಿಶೇಷ ನ್ಯಾಯಾಧೀಶರ ಆದೇಶವನ್ನು ಸಮರ್ಥಿಸಿಕೊಳ್ಳುವ ಯಾವುದೇ ಕಾರಣ ಇರುವುದಿಲ್ಲ. ಆದುದರಿಂದ ಇದು ತಳ್ಳಿಹಾಕಲು ತಕ್ಕುದಾಗಿರುತ್ತದೆ.

36. ಮೇಲಿನ ಅಭಿಪ್ರಾಯದಂತೆ ನಾನು ಈ ಮುಂದಿನ ಆದೇಶವನ್ನು ಹೊರಡಿಸಲು ಉಪಕ್ರಮಿಸಿದ್ದೇನೆ.

## ಆದೇಶ

ಈ ಅರ್ಜಿಯನ್ನು ಪುರಸ್ಕರಿಸಲಾಗಿದೆ, ಬೀದರಿನ ಮಾನ್ಯ ಸತ್ರ ನ್ಯಾಯಾಧೀಶರು (ವಿಶೇಷ ನ್ಯಾಯಾಧೀಶರು) ದಿನಾಂಕ 22.04.2015 ರ ವಿಶೇಷ ಮೊಕದ್ದಮೆ ಸಂ. 4/2015 ರಲ್ಲಿ ಹೊರಡಿಸಿದ ಆದೇಶವನ್ನು ಈ ಮೂಲಕ ತಳ್ಳಿಹಾಕಲಾಗಿದೆ. ತತ್ಪರಿಣಾಮವಾಗಿ ತನ್ನ ಮುಂದಿದ್ದ, ಆಪಾದಿತನ ವಯಸ್ಸನ್ನು ಹೊಸದಾಗಿ ಪರಿಗಣಿಸಲು, ಕಾನೂನಿನ ಅಕ್ಷರಾರ್ಥಕ್ಕೆ ಅನುಸಾರವಾಗಿ ***ಬಾಲಾಪರಾಧ ನ್ಯಾಯ (ಸಿಪಿಸಿ) ನಿಯಮಗಳು, 2007*** ರ 12 ನೇ ನಿಯಮವನ್ನು ಅನುಸರಿಸಿದ ನಂತರ ವಿಷಯವನ್ನು ಮಾನ್ಯ ವಿಶೇಷ ನ್ಯಾಯಾಧೀಶರಿಗೆ ಕಳುಹಿಸಲಾಗಿದೆ. ನಂತರ

***ಷಾ ನವಾಜ್*** ಮತ್ತು ***ಕುಲಾಯ್ ಇಬ್ರಾಹಿಂ @ ಇಬ್ರಾಹಿಂ*** (ಮೇಲೆ ಉಲ್ಲೇಖಿಸಲಾದ) ಪ್ರಕರಣದಲ್ಲಿ ಮತ್ತು ಈ ಆದೇಶದ ಪ್ರಧಾನ ಭಾಗದಲ್ಲಿ ವರದಿಯಾದ ಸರ್ವೋಚ್ಚ ನ್ಯಾಯಾಲಯದ ನಿರ್ಣಯಗಳಲ್ಲಿ ವಿಧಿಸಲಾದ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು ಯುಕ್ತ ಆದೇಶಗಳನ್ನು ಹೊರಡಿಸುವುದು.

ಕರ್ನಾಟಕ ರಾಜ್ಯ ಮುಖ್ಯ ಕಾರ್ಯದರ್ಶಿಯವರು, ವೈದ್ಯಕೀಯ ಶಿಕ್ಷಣ ಇಲಾಖೆಯ ಕಾರ್ಯದರ್ಶಿ, ಕರ್ನಾಟಕ ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಾರ್ಯದರ್ಶಿಯವರಿಗೆ ಈ ಆದೇಶದ ಪ್ರತಿಯನ್ನು ಕಳುಹಿಸಲು ರಿಜಿಸ್ಟ್ರಿಯು ನಿರ್ದೇಶಿತವಾಗಿದೆ, ಸಂಬಂಧಪಟ್ಟವರಿಗೆ ಯುಕ್ತ ಸೂಚನೆಗಳನ್ನು ನೀಡಲು ಪೊಲೀಸು ಮಹಾನಿರ್ದೇಶಕರನ್ನು ಸಹ ನಿರ್ದೇಶಿತರಾಗಿರುತ್ತಾರೆ ಮತ್ತು ಈ ಆದೇಶದ 28 ರಿಂದ 33 ರವರೆಗಿನ ಕಂಡಿಕೆಗಳಲ್ಲಿ ಈ ನ್ಯಾಯಾಲಯವು ಹೊರಡಿಸಿದ ನಿರ್ದೇಶನಗಳ ಪ್ರಕಾರ ಅಗತ್ಯ ಕ್ರಮಕೈಗೊಳ್ಳಲು ನಿರ್ದೇಶಿಸಲಾಗಿದೆ.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯವರಿಗೆ ಮತ್ತು ಮಾಹಿತಿಗಾಗಿ ಕರ್ನಾಟಕ ನ್ಯಾಯಿಕ ಅಕಾಡೆಮಿಯ ನಿರ್ದೇಶಕರಿಗೆ ಈ ಆದೇಶದ ಪ್ರತಿಯನ್ನು ಕಳುಹಿಸಲು ಸಹ ಮತ್ತು ಈ ಆದೇಶದ ಪ್ರಧಾನ ಭಾಗದಲ್ಲಿ ವಿವರಿಸಲಾದಂತೆ ಯುಕ್ತ ಕ್ರಮವನ್ನು ಕೈಗೊಳ್ಳಲು ರಿಜಿಸ್ಟ್ರಿಯು ನಿರ್ದೇಶಿತವಾಗಿರುತ್ತದೆ.

---